

# ಸಿಹಿ ಕಹಿ

ಸಂಪಾದಕರು : ಮಾರುತಿ ಬಸವಂತಪ್ಪ ಹೊಸಮನಿ
Editor : MARUTI BASAVANTAPPA HOSAMANI
Cell : +91 9741319119

ಕನ್ನಡ ದಿನಪತ್ರಿಕೆ, ಬಾಗಲಕೋಟೆ
ಬಾಗಲಕೋಟೆಯಿಂದ ಪ್ರಕಟಿತ
RNI REG No. : KARKAN/2016/75068

SIHI KAHI
KANNADA DAILY MORNING
BAGALKOT

Volume : 08 | Issue : 34 | Saturday 11-10-2025 | E-mail : maruti.b.hosamani76@gmail.com | Page: 4 | Price : Rs. 1/-


# ಅಂಬೇಡ್ಕರ್ ಯುವ ಸೇನೆಯಿಂದ ದೇಶವ್ಯಾಪಿ ಆಕ್ರೋಶ, ಸುಪ್ರೀಂ ಕೋರ್ಟ್ ನ್ಯಾಯಮೂರ್ತಿ ಬಿ.ಆರ್ ಗವಾಯಿ ವಿರುದ್ಧದ ದಾಳಿ–ಸಂವಿಧಾನ ಮತ್ತು ನ್ಯಾಯಾಂಗದ ಮೇಲೆ ನಡೆದ ಗಂಭೀರ ಪ್ರಚೋದನೆ....!

**ಸಿಹಿ ಕಹಿ ಸುದ್ದಿ,**

**ಉಡುಪಿ:**ಭಾರತದಸರ್ವೋಚ್ಚನ್ಯಾಯಾಲಯದ (ಸುಪ್ರೀಂ ಕೋರ್ಟ್) ಹಾಲಿ ನ್ಯಾಯಮೂರ್ತಿ ಬಿ.ಆರ್ ಗವಾಯಿ ಅವರ ಮೇಲೆ ವಕೀಲ ರಾಕೇಶ್ ಕಿಶೋರ್ ಶೂ ಎಸೆಯಲು ಯತ್ನಿಸಿದ ಕೃತ್ಯವು ದೇಶದಾದ್ಯಂತ ತೀವ್ರ ಖಂಡನೆಗೆ ಗುರಿಯಾಗಿದೆ. ಈ ಪ್ರಚೋದನಕಾರಿ ಕೃತ್ಯವು ಕೇವಲ ವ್ಯಕ್ತಿಯ ಮೇಲಿನ ದಾಳಿಯಾಗಿರದೆ, ಭಾರತದ ನ್ಯಾಯಾಂಗ ವ್ಯವಸ್ಥೆ, ಸಂವಿಧಾನ ಮತ್ತು ಪ್ರಜಾಪ್ರಭುತ್ವದ ಮೂಲಭೂತ ಮೌಲ್ಯಗಳ ಮೇಲೆ ನಡೆದ ಗಂಭೀರ ದಾಳಿ ಎಂದು ವ್ಯಾಪಕವಾಗಿ ಪರಿಗಣಿಸಲಾಗಿದೆ. ಈ ಘಟನೆಯುಸಂವಿಧಾನವಿರೋಧಿಮನಸ್ಥಿತಿಯ ಪ್ರತಿಫಲ ಎಂದು ಅಭಿಪ್ರಾಯಪಟ್ಟಿರುವ ಅಂಬೇಡ್ಕರ್ ಯುವಸೇನೆ ಸೇರಿದಂತೆ ಹಲವು ಸಂಘಟನೆಗಳು ದೇಶವ್ಯಾಪಿ ಬೃಹತ್ ಹೋರಾಟವನ್ನು ಪ್ರಾರಂಭಿಸಿವೆ.

ಉಡುಪಿಯಲ್ಲಿ ಅಂಬೇಡ್ಕರ್ ಯುವಸೇನೆಯಿಂದ ತೀವ್ರ ಪ್ರತಿಭಟನೆ: ಪ್ರತಿಕೃತಿ ದಹನ

ಈ ಅಮಾನವೀಯ ಕೃತ್ಯವನ್ನು ಖಂಡಿಸಿ, ಕರ್ನಾಟಕದ ಉಡುಪಿ ನಗರದಲ್ಲಿ ಅಂಬೇಡ್ಕರ್ ಯುವಸೇನೆ ತೀವ್ರ ಆಕ್ರೋಶ ಹೊರಹಾಕಿದೆ. ಉಡುಪಿಯ ಅಜ್ಜರಕಾಡು ಹುತಾತ್ಮ ಸ್ಮಾರಕದ ಬಳಿ ಪ್ರತಿಭಟನೆ ನಡೆಸಿ, ಆರೋಪಿ ವಕೀಲ ರಾಕೇಶ್ ಕಿಶೋರ್ ಅವರ ಪ್ರತಿಕೃತಿಗೆ ಬೆಂಕಿ ಹಚ್ಚುವ ಮೂಲಕ ಪ್ರತಿಭಟನಕಾರರು ತಮ್ಮ ಆಕ್ರೋಶವನ್ನು ವ್ಯಕ್ತಪಡಿಸಿದ್ದಾರೆ.

ಗಡಿಪಾರಿಗೆ ಆಗ್ರಹ: ದಲಿತ ಚಿಂತಕ ಹಾಗೂ ಜನಪರ ಹೋರಾಟಗಾರ ಜಯನ್ ಮಲ್ಪೆ ಅವರು ಮಾತನಾಡಿ, ಅಂಬೇಡ್ಕರ್ ಆಶಯಗಳ ಪ್ರತಿಪಾದಕ ನ್ಯಾಯಮೂರ್ತಿ ಗವಾಯಿ ಅವರನ್ನು ಗುರಿಯಾಗಿಸಿದ ಈ *"ಸನಾತನಿ ವಕೀಲ"*ನನ್ನು ಕೂಡಲೇ ಭಾರತದಿಂದ ಗಡಿಪಾರು ಮಾಡಬೇಕು ಎಂದು ಬಲವಾಗಿ ಆಗ್ರಹಿಸಿದರು.

ಪ್ರತಿಭಟನೆಯ ಧ್ವನಿ: ಈ ಕೃತ್ಯವು ಸಂವಿಧಾನ ಮತ್ತು ಪ್ರಜಾಪ್ರಭುತ್ವಕ್ಕೆ ಮಾಡಿದ ಘೋರ ಅವಮಾನ ಎಂದು ಪ್ರತಿಭಟನಾಕಾರರು ಬಣ್ಣಿಸಿದ್ದಾರೆ.

ಸಾಂಘಿಕ ಆರೋಪ: ದಲಿತರು ಮತ್ತು ಮಹಿಳೆಯರ ಉನ್ನತಿಯನ್ನು ಸಹಿಸದ ಸನಾತನವಾದಿ ಮನೋಭಾವದ ಪ್ರತಿಫಲವೇ ಈ ಘಟನೆ. ಇದರ ಹಿಂದೆ ಸಂಘಪರಿವಾರದ ವ್ಯವಸ್ಥಿತ ಶಕ್ತಿಯ ಕೈವಾಡವಿದೆ ಎಂದು ಚಿಂತಕರು ಗಂಭೀರ ಆರೋಪ ಮಾಡಿದ್ದಾರೆ.

ಸಂವಿಧಾನವೇ ಆಧಾರದ ಘೋಷಣೆ: ಭಾರತವು ಯಾವುದೇ ಧರ್ಮಗ್ರಂಥದ ಆಧಾರದ ಮೇಲೆ ನಡೆಯುತ್ತಿಲ್ಲ, ಬದಲಾಗಿ ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ಬರೆದ ಭಾರತ ಸಂವಿಧಾನದ ಆಧಾರದ ಮೇಲೆ ನಡೆಯುತ್ತದೆ ಎಂಬುದನ್ನು ಪ್ರತಿಭಟನಕಾರರು ಬಲವಾಗಿ ಪ್ರತಿಪಾದಿಸಿದರು.

ಬುದ್ಧನ ಆದರ್ಶಕ್ಕೆ ಪ್ರಶಂಸೆ: ಘಟನೆಯ ಸಂದರ್ಭದಲ್ಲೂ, ನ್ಯಾಯಮೂರ್ತಿ ಗವಾಯಿ ಅವರು ಶಾಂತ ಮನೋಭಾವದಿಂದ, ಯಾವುದೇ ಪ್ರತಿಕ್ರಿಯೆ ನೀಡದೆ ಕೋರ್ಟ್ ಕಲಾಪವನ್ನು ಮುಂದುವರೆಸಿದ ರೀತಿಯನ್ನು ಬುದ್ಧನ ಆದರ್ಶಕ್ಕೆ ಹೋಲಿಸಿ ಪ್ರಶಂಸಿಸಲಾಯಿತು.




ರಾಷ್ಟ್ರವ್ಯಾಪಿ ಬೃಹತ್ ಹೋರಾಟ ಮತ್ತು ದಲಿತ ವಿರೋಧಿ ಮನಸ್ಥಿತಿಯ ಖಂಡನೆ

ಕೋರ್ಟ್ ನ್ಯಾಯಮೂರ್ತಿಗಳ ಮೇಲಿನ ಈ ದಾಳಿಯು ಕೇವಲ ಉಡುಪಿಯ ಒಂದು ಸ್ಥಳಕ್ಕೆ ಸೀಮಿತವಾಗದೆ ರಾಷ್ಟ್ರವ್ಯಾಪಿ ಬೃಹತ್ ಪ್ರತಿಭಟನೆ ಮತ್ತು ವ್ಯಾಪಕ ಖಂಡನೆಗೆ ಕಾರಣವಾಗಿದೆ.

ರಾಷ್ಟ್ರಮಟ್ಟದ ಆಕ್ರೋಶ: ದೇಶದಾದ್ಯಂತ ದಲಿತ ಸಂಘಟನೆಗಳು, ಪ್ರಗತಿಪರ ಚಿಂತಕರು, ವಕೀಲರ ಸಂಘಗಳು ಮತ್ತು ಸಾಮಾಜಿಕ ನ್ಯಾಯದ ಪರ ಒಲವುಳ್ಳ ನಾಯಕರು ಏಕಕಂಠದಿಂದ ಈ ಕೃತ್ಯವನ್ನು ಖಂಡಿಸಿದ್ದಾರೆ.

ದಲಿತ ವಿರೋಧಿ ಮನಸ್ಥಿತಿಯ ಖಂಡನೆ: ನ್ಯಾಯಮೂರ್ತಿ ಗವಾಯಿ ಅವರು ದಲಿತ ಸಮುದಾಯಕ್ಕೆ ಸೇರಿರುವುದು ಮತ್ತು ಸಂವಿಧಾನದ ಆಶಯಗಳನ್ನು ಬಲವಾಗಿ ಪ್ರತಿಪಾದಿಸುವುದರಿಂದಲೇ ಅವರನ್ನು ಉದ್ದೇಶಪೂರ್ವಕವಾಗಿ ಗುರಿಯಾಗಿಸಲಾಯಿತು ಎಂಬ ಭಾವನೆ ವ್ಯಾಪಕವಾಗಿದೆ. ಹೀಗಾಗಿ, ಈ ಹೋರಾಟವು ಕೇವಲ ನ್ಯಾಯಾಂಗದ ರಕ್ಷಣೆಗಾಗಿ ಮಾತ್ರವಲ್ಲದೆ, ದಲಿತ ವಿರೋಧಿ/ಸಂವಿಧಾನ ವಿರೋಧಿ ಮನಸ್ಥಿತಿಯ ವಿರುದ್ಧದ ಹೋರಾಟವಾಗಿ ಮಾರ್ಪಟ್ಟಿದೆ.

ಕೋರ್ಟ್ನಿಂದಲೂ ಪ್ರತಿಭಟನೆ: ಅನೇಕ ರಾಜ್ಯಗಳ ಹೈಕೋರ್ಟ್ಗಳು ಮತ್ತು ಜಿಲ್ಲಾ ಕೋರ್ಟ್ಗಳ ವಕೀಲರು ಈ ಕೃತ್ಯದ ವಿರುದ್ಧ ಪ್ರತಿಭಟನೆಗಳಲ್ಲಿ ಭಾಗವಹಿಸಿ, ನ್ಯಾಯಾಂಗದ ಸ್ವಾತಂತ್ರ್ಯ ಮತ್ತು ನ್ಯಾಯಮೂರ್ತಿಗಳ ಸುರಕ್ಷತೆಗೆ ಆಗ್ರಹಿಸಿದರು.

ಸಾರ್ವಜನಿಕ ಚರ್ಚೆ: ಘಟನೆಯ ಕುರಿತು ಮಾಧ್ಯಮಗಳು, ಸಾಮಾಜಿಕ ಮಾಧ್ಯಮಗಳು ಮತ್ತು ರಾಜಕೀಯ ವಲಯದಲ್ಲಿ ತೀವ್ರ ಚರ್ಚೆ ನಡೆದು, ಸಂವಿಧಾನ ಮತ್ತು ನ್ಯಾಯಾಂಗದ ಘನತೆಯನ್ನು ಎತ್ತಿಹಿಡಿಯುವ ತುರ್ತು ಅಗತ್ಯವನ್ನು ಒತ್ತಿಹೇಳಲಾಯಿತು.

ಕಾನೂನಾತ್ಮಕ ವರದಿ ಮತ್ತು ಕಠಿಣ ಪರಿಣಾಮಗಳು

ವಕೀಲ ರಾಕೇಶ್ ಕಿಶೋರ್ ಅವರ ಕೃತ್ಯಕ್ಕೆ ಸಂಬಂಧಿಸಿದಂತೆ ಕಠಿಣ ಕಾನೂನಾತ್ಮಕ ಕ್ರಮಗಳನ್ನು ಕೈಗೊಳ್ಳುವಂತೆ ದೇಶಾದ್ಯಂತ ಒತ್ತಾಯ ಕೇಳಿಬಂದಿದ್ದು, ಈ ಕೃತ್ಯದ ಮೇಲೆ ಗಂಭೀರ ಪರಿಣಾಮಗಳು ಎದುರಾಗಲಿವೆ.

ಕ್ರಿಮಿನಲ್ ಮೊಕದ್ದಮೆ ಮತ್ತು ಭದ್ರತಾ ಲೋಪ ದಾಳಿಯ ಆರೋಪ: ನ್ಯಾಯಮೂರ್ತಿಗಳ ಮೇಲೆ ಶೂ ಎಸೆಯಲು ಯತ್ನಿಸಿದ್ದು, ಇದು ದಾಳಿ (Assault) ಮತ್ತು ಸಾರ್ವಜನಿಕ ನೌಕರನ ಕರ್ತವ್ಯ ನಿರ್ವಹಣೆಗೆ ಅಡ್ಡಿಪಡಿಸಿದ ಗಂಭೀರ ಕ್ರಿಮಿನಲ್ ಅಪರಾಧದ ಅಡಿಯಲ್ಲಿ ಮೊಕದ್ದಮೆ ದಾಖಲಾಗಿದೆ.

ಭದ್ರತಾ ಲೋಪ: ಸುಪ್ರೀಂ ಕೋರ್ಟ್ನಂತಹ ಅತ್ಯುನ್ನತ ನ್ಯಾಯಾಲಯದಲ್ಲಿ ಈ ಭದ್ರತಾ ಲೋಪವು ನ್ಯಾಯಾಂಗದ ನೌಕರರ ಮತ್ತು ನ್ಯಾಯಮೂರ್ತಿಗಳ ಸುರಕ್ಷತೆಯ ಬಗ್ಗೆ ರಾಷ್ಟ್ರಮಟ್ಟದಲ್ಲಿ ಗಂಭೀರ ಪ್ರಶ್ನೆಗಳನ್ನು ಹುಟ್ಟುಹಾಕಿದೆ.

ವೃತ್ತಿಪರ ನಡತೆ ಮತ್ತು ವಕೀಲ ವೃತ್ತಿಯ ನಿಷೇಧ ಕೋರ್ಟ್ ನಿಂದನೆ (ContemptofCourt): ನ್ಯಾಯಾಲಯದ ಕಲಾಪಕ್ಕೆ ಅಡ್ಡಿಪಡಿಸುವುದು ಮತ್ತು ನ್ಯಾಯಮೂರ್ತಿಗಳ ಘನತೆಯನ್ನು ಕಡಿಮೆ ಮಾಡುವ ಕೃತ್ಯವು ನ್ಯಾಯಾಂಗ ನಿಂದನೆ ಕಾಯಿದೆ (Contempt of Courts Act) ಅಡಿಯಲ್ಲಿ ಅತಿ ಗಂಭೀರ ಅಪರಾಧವಾಗಿದೆ.

ವಕೀಲ ವೃತ್ತಿ ನಿಷೇಧ (Disbarment): ವಕೀಲರ ಈ ಕೃತ್ಯವು ವೃತ್ತಿಪರ ನಡವಳಿಕೆಯ ತೀವ್ರ ಉಲ್ಲಂಘನೆಯಾಗಿದ್ದು, ಭಾರತೀಯ ವಕೀಲರ ಪರಿಷತ್ (Bar Council of India - BCI) ವಕೀಲರ ನೀತಿ ಸಂಹಿತೆ ಅಡಿಯಲ್ಲಿ ಅವರ ವಕೀಲ ವೃತ್ತಿಯ ಪರವಾನಗಿಯನ್ನು ರದ್ದುಗೊಳಿಸುವ ಅಥವಾ ಅಮಾನತುಗೊಳಿಸುವ ಸಾಧ್ಯತೆ ಹೆಚ್ಚಿದೆ. ನ್ಯಾಯಾಂಗದ ಮೇಲಿನ ಈ ದಾಳಿಯಿಂದಾಗಿ, ಕೌನ್ಸಿಲ್ನಿಂದ ಗರಿಷ್ಠ ಶಿಸ್ತು ಕ್ರಮವನ್ನು ನಿರೀಕ್ಷಿಸಲಾಗಿದೆ.

ಸಾಂವಿಧಾನಿಕ ಪ್ರಶ್ನೆಗಳು

ನ್ಯಾಯಾಂಗದ ಸ್ವಾತಂತ್ರ್ಯ (Judicial Independence): ಈ ಘಟನೆಯು ನ್ಯಾಯಾಂಗದ ಸ್ವಾತಂತ್ರ್ಯವನ್ನು ಕಾಪಾಡುವ ಅಗತ್ಯವನ್ನು ಪುನರುಚ್ಚರಿಸಿದೆ. ನ್ಯಾಯಮೂರ್ತಿಗಳು ಯಾವುದೇ ಭಯ ಅಥವಾ ಒತ್ತಡವಿಲ್ಲದೆ ನಿರ್ಭೀತಿಯಿಂದ ತೀರ್ಪು ನೀಡುವ ವಾತಾವರಣದ ಮೇಲೆ ಈ ದಾಳಿ ಪ್ರಶ್ನಾರ್ಥಕ ಚಿಹ್ನೆಯನ್ನು ಹಾಕಿದೆ.

ಸಾಂವಿಧಾನಿಕ ನೈತಿಕತೆ:

ಈಕೃತ್ಯವುಸಂವಿಧಾನದಮೂಲಭೂತನೈತಿಕತೆ ಮತ್ತು ಸಾಮಾಜಿಕ ನ್ಯಾಯದ ಮೌಲ್ಯಗಳಿಗೆ ವಿರುದ್ಧವಾಗಿದೆ ಎಂದು ಕಾನೂನು ಪಂಡಿತರು ಮತ್ತು ಚಿಂತಕರು ಅಭಿಪ್ರಾಯಪಟ್ಟಿದ್ದಾರೆ.

ಈ ಸಂಪೂರ್ಣ ಘಟನೆಯು ಭಾರತದ ನ್ಯಾಯಾಂಗಮತ್ತುಸಂವಿಧಾನದಅಡಿಪಾಯದ ಮೇಲೆ ನಡೆದ ಒಂದು ಪ್ರಚೋದನಕಾರಿ ದಾಳಿಯಾಗಿದ್ದು,ನ್ಯಾಯಾಂಗದ ಘನತೆಯನ್ನು ಕಾಪಾಡಲು ಮತ್ತು ಸಂವಿಧಾನದ ಆಶಯಗಳನ್ನು ಎತ್ತಿಹಿಡಿಯಲು ಸಮಾಜದ ಎಲ್ಲ ಸ್ತರಗಳಿಂದಲೂ ಕಠಿಣ ಮತ್ತು ಒಗ್ಗಟ್ಟಿನ ಪ್ರತಿಕ್ರಿಯೆಗೆ ಕಾರಣವಾಗಿದೆ.

**ವರದಿ:**
**ಆರತಿ.ಗಿಳಿಯಾರು.ಉಡುಪಿ**

# ಎನ್‌ಟಿಪಿಸಿ ಕಾರ್ಮಿಕರಿಂದ ವಿವಿಧ ಬೇಡಿಕೆಗಾಗಿ ಆಗ್ರಹಿಸಿ ಪ್ರತಿಭಟನೆ ಸಚಿವರಿಗೆ ಮನವಿ ಸಲ್ಲಿಸಿದ ಕಾರ್ಮಿಕ ಸಂಘದ ಪದಾಧಿಕಾರಿಗಳು

**ವರದಿ: ಲಾಲಸಾಬ ಸವಾರಗೋಳ**

**ಕೊಲ್ಹಾರ :** ತಾಲ್ಲೂಕಿನ ಕೂಡಗಿ ಎನ್ ಟಿ ಪಿ ಸಿ ಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಕಾರ್ಮಿಕರು ಇದೆ ಬುಧವಾರ ದಿನಾಂಕ 8/10/25 ರಂದು ವಿವಿಧ ಬೇಡಿಕೆಯನ್ನು ಈಡೇರಿಸುವಂತೆ ಕೊರಿ ಬೃಹತ್ ಪ್ರತಿಭಟನೆಗೆ ಕರೆ ನೀಡಿದ್ದಾರೆ.

ಶಿವಾನಂದ ಎಸ್ ಪಾಟೀಲ ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಹಾಗೂ ಕೃಷಿ ಮಾಡುಕಟ್ಟೆ ಸಚಿವರ ನಿವಾಸಕ್ಕೆ ಎನ್ ಟಿ ಪಿ ಸಿ ಕಾರ್ಮಿಕರ ಸಂಘದ ಪದಾಧಿಕಾರಿಗಳು ಭೇಟಿ ನೀಡಿ ತಮ್ಮ ಬೇಡಿಕೆಗಳ ಕುರಿತು ಮನವಿ ಪತ್ರ ಸಲ್ಲಿಸಿದರು.

ಎನ್ ಟಿ ಪಿ ಸಿ ಯಲ್ಲಿ ಕೆಲಸ ನಿರ್ವಹಿಸುತ್ತಿರುವ ಕಾರ್ಮಿಕರಿಗೆ ಆಗುತ್ತಿರುವ ಸಮಸ್ಯೆಗಳ ಬಗ್ಗೆ ಅನೇಕ ಸಾರಿ ಮೌಖಿಕವಾಗಿ ಮತ್ತು ಪತ್ರಗಳ ಮುಖಾಂತರ ತಮ್ಮಲ್ಲಿ ಮನವಿ ಸಲ್ಲಿಸಿರುತ್ತೇವೆ. ಆದರೂ ಕೂಡಾ ನಮ್ಮ ಮನವಿಗಳಿಗೆ ತಾವುಗಳು ಸ್ಪಂದನೆ ಮಾಡುತ್ತಿಲ್ಲ, ಕಾರ್ಮಿಕರ ಸಮಸ್ಯೆಗಳ ಬಗ್ಗೆ ದಿನಾಂಕ: 06-01-2025 ರಂದು ಮೇನ್ ಗೇಟ್ ಎದುರಿಗೆ ಪ್ರತಿಭಟನೆಯನ್ನು ಹಮಿಕೊಂಡಾಗ ಪೋಲಿಸ್ ಇಲಾಖೆ ಅವರ ಸಹಮತದಲ್ಲಿ ಪ್ರತಿಭಟನೆಯನ್ನು ಹಿಂತೆಗೆದುಕೊಂಡಿರುತ್ತೇವೆ. ತಾವುಗಳು ಎಲ್ಲಾ ಬೇಡಿಕೆಗಳನ್ನು ಈಡೇರಿಸುತ್ತೇವೆಂದು ಒಪ್ಪಿರುತ್ತೀರಿ ಬೇಡಿಕೆಗಳನ್ನು ಇನ್ನೂವರೆಗೂ ಈಡೇರಿಸಿರುವುದಿಲ್ಲ.

ಕಾರ್ಮಿಕರಿಗೆ ಆಗುತ್ತಿರುವ ಸಮಸ್ಯೆಗಳನ್ನು ತಮಗೆ ಈ ಮೊದಲು ಸರಿ ಸುಮಾರು ಮೂರು ಬಾರಿ ಮನವಿ ಪತ್ರಗಳನ್ನು ಸಲ್ಲಿಸಿರುತ್ತೇವೆ.ಸದರಿ ಸಮಸ್ಯೆಗಳಿಗೆ ಇಲ್ಲಿಯ ವರೆಗೆ ಯಾವುದೇ ತರಹದ ಪರಿಹಾರವನ್ನು ಕೊಡದಿರುವುದಕ್ಕಾಗಿ ನಾವುಗಳು ದಿನಾಂಕ: 08/10/2025 ರಂದು ಮೇನ್ ಗೇಟ್ ದ ಎದುರಿಗೆ ಎಲ್ಲಾ ಕಾರ್ಮಿಕರು



ಸೇರಿಕೊಂಡು ಪ್ರತಿಭಟನೆಯನ್ನು ಮಾಡುತ್ತೇವೆ. ತಾವುಗಳು ಆದಷ್ಟು ಬೇಗನೆ ನಮ್ಮ ಬೇಡಿಕೆಗಳನ್ನು ಈಡೇರಿಸಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತೇವೆ ಎಂದು ಸಚಿವ ಶಿವಾನಂದ ಪಾಟೀಲ ಅವರಿಗೆ ಮನವಿ ಮಾಡಿಕೊಂಡರು.

ಈ ಸಂರ್ಬದಲ್ಲಿ ಟಿಣಿಠಿಛಿ ಗುತ್ತಿಗೆ ಕಾರ್ಮಿಕರ ಸಂಘದ ಗೌರವ ಅದಕ್ಷರು ಶ್ರೀ ಬಸವರಾಜ್ ಆಲೂರ್ ಅಧಕ್ಷರಾದ ಶ್ರೀ ಆರಿಫ್ ತಾಳಿಕೋಟಿ. ಉಪಾಧ್ಯಕ್ಷರಾದ ಶ್ರೀ ಹಸನಸಾಬ ಚೌರದ.ಶ್ರೀಸಂತೋಷಮಳಲಿ. ಪ್ರದಾನ ಕಾರ್ಯದರ್ಶಿಗಳು ಶ್ರೀ ಮಹೇಶ್ ಕೊಲಕಾರ್. ಖಜಾಂಚಿ ಶ್ರೀ ಲಾಲಸಾಬ್ ತಿಗಣಿಬಿದಿರಿ. ಕಾರ್ಯದರ್ಶಿಗಳಾದ ಶ್ರೀ ಪ್ರವೀಣ್ ಕುಲಕರ್ಣಿ. ಸದಸ್ಯರಾದ ಶ್ರೀ ದ್ಯಾಮಣ್ಣ ಮಕಾಶಿ. ಬಾಬು ಬಾಗೇವಾಡಿ. ಸುನಿಲ್ ಹಿರೇಮಠ್ ಉಪಸ್ಥಿತರಿದ್ದರು.

**ಎನ್ ಟಿ ಪಿ ಸಿ ಕಾರ್ಮಿಕರ ವಿವಿಧ ಬೇಡಿಕೆಗಳು**

1) ಹಲವು ವರ್ಷಗಳಿಂದ ಕೆಲಸ ನಿರ್ವಹಿಸುತ್ತಿರುವ ಕಾರ್ಮಿಕರಿಗೆ ಮತ್ತು ಅವರ ವಿದ್ಯಾರ್ಹತೆಗೆ ತಕ್ಕಂತೆ Un-skilled-To-Semiskilled ) Semi-skilled To Skilled Skilled To High Skilled ಮಾಡಬೇಕೆಂದು ತಮ್ಮಲ್ಲಿ ದಿನಾಂಕ: 01/11/2023 ರಂದು ಮನವಿ ಸಲ್ಲಿಸಿದ್ದು ಮತ್ತು ಅಂದು ದಿನಾಂಕ: 06/11/2023 ರಂದು ಹೋರಾಟ ಮಾಡಲು ತೀರ್ಮಾನಿಸಿದ್ದೇವು ಆದರೆ ಅಂದು ತಾವುಗಳು ನಿಮ್ಮ ಬೇಡಿಕೆಗಳನ್ನು ಈಡೇರಿಸುತ್ತೇವೆ ಮತ್ತು ಕಠ ಮಾಡುವ ಎಲ್ಲ ೦ಖಅ ಗಳಿಗೆ ಹೇಳುತ್ತೇವೆ ಕಔ ನಲ್ಲಿ ಸರಿಪಡಿಸುತ್ತೇವೆ ಅಂತಾ ತಾವುಗಳು ಹೇಳಿದ್ದು ಇನ್ನು ವರೆಗೂ ಆಗಿರುವುದಿಲ್ಲ (ಅಥವಾ ವಿಶೇಷವಾಗಿ ಯಾವುದಾದರೂ ಅನೌನ್ಸ ಕೊಡಿ)

2) ಎನ್ ಟಿ ಪಿ ಸಿ ಟೌನಶಿಪ್ ಹಾಸ್ಪಿಟಲ್ ನಲ್ಲಿ ಶ್ರೀಮತಿ ಸುಮಾ ಅಂಟೋಣಿ (ಸ್ಟಾಪ್ ನರ್ಸ) ಇವರು ಡಿ ಗ್ರುಪ್ ಕಾರ್ಮಿಕರು ಮತ್ತು ಅಲ್ಲೇ ಹಾಸ್ಪಿಟಲ್ ನಲ್ಲಿ ಕೆಲಸ ಮಾಡುವ ಕಾರ್ಮಿಕರಿಗೆ ಮೆಂಟಲಿ ಅರ್ಯಾಸ್ ಮೆಂಟ್ ಮಾಡುತ್ತಾರೆ ಮತ್ತು ಟೌನ್ ಶಿಪ್ ಮತ್ತು ಪ್ಲಾಂಟ್ ನಲ್ಲಿ ಕೆಲಸ ಮಾಡುವ ಕಾರ್ಮಿಕರು ಹಾಸ್ಪಿಟಲ್ ಗೆ ಹೋದರೆ ನಿಮಗೆ ಮೆಡಿಶನ್ ಬರುವುದಿಲ್ಲ ನಿಮಗೆ ಕೊಡಲು ಆಗುವುದಿಲ್ಲ ಅಂತಾ ಹೇಳಿ, ನೀವು ಮೇಲಾಧಿಕಾರಿಗಳಿಗೆ ಅಥವಾ ಯಾರಿಗಾದರೂ ಹೇಳಿ ಕಂಪ್ಲೇಂಟ್ ಮಾಡಿ ಎಂದು ಕಾರ್ಮಿಕರಿಗೆ ಆವಾಜ್ ಹಾಕುತ್ತಾರೆ.

3)ಎಂಪ್ಲಾಯ್‌ಗೇಟ್‌ನಲ್ಲಿಮಹಿಳೆಯರಿಗೂ ಒಳಗೆ ಬರಲು ಹಾಗೂ ಹೊರಗೆ ಹೋಗಲು ಅವಕಾಶವನ್ನು ಮಾಡಿಕೊಡಬೇಕು.

4) ಸರಿಯಾದ ಸಮಯಕ್ಕೆ ಮೆಡಿಕಲ್ ಚೆಕಪ್ ಮಾಡಬೇಕು ಮತ್ತು ಕಾರ್ಮಿಕರ ಆರೋಗ್ಯದಲ್ಲಿ ಇನ್ನು ಸಮಸ್ಯೆ ಇದ್ದರೆ ಎನ್ ಟಿ ಪಿ ಸಿ ಯಿಂದ ಮೆಡಿಕಲ್ ಟ್ರೇಟ್ ಮೆಂಟ್ ನೀಡಬೇಕು ಮತ್ತು ಏನೇ ಇದ್ದರೂ ತಾವುಗಳು ಸರಿ ಮಾಡಬೇಕು.

5) ಸರಿಯಾದ ಶುದ್ಧ ಕುಡಿಯುವ ನೀರು ಕಾರ್ಮಿಕರಿಗೆ ಸಿಗುತ್ತಿಲ್ಲ.ಮತ್ತು ಇದ್ದ ಆರ್ ಓ ಘಟಕಗಳು ಸರಿಯಾಗಿ ಕೆಲಸ ನಿರ್ವಹಿಸುತ್ತಿಲ್ಲ ಅವುಗಳಲ್ಲಿ ಸರಿಯಾಗಿ ನೀರು ಪಿಲ್ಟರ ಆಗುತ್ತಿಲ್ಲ.

6) ಎಲ್ಲಾ ಏರಿಯಾದಲ್ಲಿ ಶೌಚಾಲಯದ ವ್ಯವಸ್ಥೆ ಸರಿಯಾಗಿ ಇರುವುದಿಲ್ಲ.ದಷ್ಟು ಬೇಗನೆ ಮಾಡಬೇಕು.

7) ಕೆಲಸ ನಿರ್ವಹಿಸುತ್ತಿರುವ ಎಲ್ಲ ಕಾರ್ಮಿಕರಿಗೆ ಮೇನ್ ಪ್ಯಾಂಟ್ ಮತ್ತು ಸಿ ಹೆಚ್ ಪಿ ಏರಿಯಾದಲ್ಲಿ ಲೇಬರ ರತ್ನ ರೂಮ್ ಮಾಡಬೇಕು.

8) ಕಂಪನಿ ಒಳಗಡೆ ಆಯ್ ಸಿ ಹೆಚ್ ಕ್ಯಾಂಟೀನ ಮದ್ಯಾಹ್ನ ಬೆಳಿಗ್ಗೆ ಅದಕ್ಕೆ ತಾವುಗಳು ಸಮಯವನ್ನು ನಿಗದಿ ಮಾಡಬೇಕು, ನಮ್ಮ ಕಾರ್ಮಿಕರು ಸ್ವಲ್ಪ ತಡವಾಗಿ ಬಂದರೂ ಮತ್ತು ಸ್ವಲ್ಪ ಬೇಗನೇ ಬಂದರೂತೆಗೆದಿರುವುದಿಲ್ಲ ಮತ್ತು ಒಳಗಡೆ ಪ್ರೈವೇಟ್ ಕ್ಯಾಂಟೀನ್ ಗೆ ಅವಕಾಶ ನೀಡಬೇಕು.

9) ಮೇನ್ ಪ್ಲಾಂಟ್ ದಲ್ಲಿ ಮಿಲ್ ಏರಿಯಾ ಮತ್ತು ಒಳಗೆ ಪ್ಲೋರನಲ್ಲಿ ದಸ್ಯ ಮತ್ತು ಸ್ಟೈಲ್ ಹೆಚ್ಚಿಗೆ ಬರುತ್ತದೆ ಅದನ್ನು ಸರಿ ಮಾಡಬೇಕು.

10) ಸರಿಯಾದ ಫೇಸ್ ಮಾಸ್ಕ ವಿತರಿಸಬೇಕು.

11) ಮೆಡಿಕಲ್ ಚೆಕಪ್ ನಲ್ಲಿ ಆರೋಗ್ಯ ಸಮಸ್ಯೆ ಬಂದರೆ ಕಾರ್ಮಿಕರಿಗೆ ಕೆಲಸ ಬಿಡಿಸುವಂತ್ತಿಲ್ಲ ಆರೋಗ್ಯ ಟ್ರೇಟ್ ಎನ್‌ಟಿಪಿಸಿ ಒತಿಯಿಂದ ಮಾಡಬೇಕು.

# ಮಾತೃ ಇಲಾಖೆಯ ಸೇವೆಗಾಗಿ – ಮುಖ್ಯ ಮಂತ್ರಿಯಿಂದ ಸಮ್ಮಾನ

**ಸಿಹಿ ಕಹಿ ಸುದ್ದಿ,**

**ಇಲಕಲ್ :**ಇಲ್ಲಿನ ನಿವೃತ್ತ ಉಪನ್ಯಾಸಕ ರಾಮನಗೌಡ ಸಂದಿಮನಿ ಅವರ ಸುಪುತ್ರರಿಯಾದ ಐಶ್ವರ್ಯ ಗೌಡರ (ಸಂದಿಮನಿ) ಕುಶಾಲ ನಗರದ ತರಬೇತಿ ಕೇಂದ್ರದಲ್ಲಿ 2019 ರಿಂದ 2024 ರ ವರೆಗೆ ಅರಣ್ಯ ಇಲಾಖೆಯಲ್ಲಿ ಕಾರ್ಯ ದಕ್ಷತೆಯಿಂದ ಕಾರ್ಯನಿರ್ವಹಿಸಿ ಪರಿಣಿತ ಸಂಪನ್ಮೂಲ ವ್ಯಕ್ತಿಗಳನ್ನು ಇಲಾಖೆಯಲ್ಲಿ ಕಾರ್ಯ ನಿಷ್ಠೆಯಿಂದ ಕೆಲಸ ನಿರ್ವಹಿಸುವಂತೆ ತಯಾರಿಸಿ ರೈಫಲ್ ತರಬೇತಿ, ಶಸ್ತ್ರಾಸ್ತ್ರ ನಿರ್ವಹಣೆ, ಕ್ಯಾನ್ವೊಕೇಶನ್ ಪರೇಡಗೆ, ನಿಖರವಾದ ಮಾರ್ಗದರ್ಶನ ನೀಡಿ ಉತ್ತಮ ಕಾರ್ಯಧ್ಯಕ್ಷತೆ ದಾಖಲಿಸಿ ಸಮಯ ಪಾಲನೆ ಮತ್ತು ಪ್ರಾಮಾಣಿಕತೆ ಯಿಂದ ಮಾತೃ ಇಲಾಖೆಯ ಕಾರ್ಯ ನಿರ್ವಹಿಸಿ ಪುರುಷ ಸಿಬ್ಬಂದಿಗೂ ಕಮ್ಮಿ ಇಲ್ಲದಂತೆ ತರಬೇತಿಯಲ್ಲಿ ಸುಮಾರು 5 ವರ್ಷಗಳ ಕಾಲ ಕರ್ತವ್ಯ ನಿಷ್ಠೆ ಸಮಯ ಪಾಲನೆ ತರಬೇತಿಯ ವಿದ್ಯಾರ್ಥಿಗಳಿಗೆ ರೋಡ್ ಮಾಡಲ್ ಆಗಿ ಕಾರ್ಯ ನಿರ್ವಹಿಸಿ ಸೇವೆ ಸಲ್ಲಿಸಿದ ಕುಮಾರಿ ಐಶ್ವರ್ಯ ಗೌಡರ (ಸಂದಿಮನಿ) ಅವರಿಗೆ ಮಾನ್ಯ ಮುಖ್ಯಮಂತ್ರಿ ಸನ್ಮಾನ್ಯ ಸಿದ್ದರಾಮಯ್ಯ ನವರು ಕಾರ್ಯ ದಕ್ಷತೆ ಕಾರ್ಯ ಕ್ಷಮತೆ ಮತ್ತು ತರಬೇತಿಯಲ್ಲಿನ ಸಾಧನೆ ಶ್ಲಾಘನೀಯ ಸೇವೆಗಾಗಿ ಗೌರವ ಸನ್ಮಾನ ಸಲ್ಲಿಸಿದ್ದು ನಮಗೆ ತುಂಬಾ ಸಂತೋಷವಾಗಿದೆ ಎಂದು ಸಾಧಕೀಯ ತಂದೆ–ತಾಯಿಗಳು ಇಷ್ಟು ಚಿಕ್ಕ ವಯಸ್ಸಿನಲ್ಲಿ ನಮ್ಮ ಮಗಳು ಇಲಾಖೆಯ ಜವಾಬ್ದಾರಿಯುತ ಕಾರ್ಯ ನಿರ್ವಹಿಸಿದ ಐಶ್ವರ್ಯಗೆ ಕೃತಜ್ಞತೆ ಸಲ್ಲಿಸಿದರು.



**ಹವ್ಯಾಸಿ ಬರಹಗಾರರು:ಜಗದೀಶ್.ಗಿರಡ್ಡಿ.ಇಲಕಲ್**

# ಸಮಾಜ ಕಲ್ಯಾಣ ಇಲಾಖೆ ಅಧಿಕಾರಿ ನಟರಾಜ ವಿರುದ್ಧ – ಶಿಸ್ತು ಕ್ರಮಕ್ಕೆ ಶಾಸಕನ ಪುತ್ರ ಆಗ್ರಹ




**ಸಿಹಿ ಕಹಿ ಸುದ್ದಿ,**

**ಮಾನ್ವಿ :** ಮಾನ್ವಿ ಸಮಾಜ ಕಲ್ಯಾಣ ಇಲಾಖೆಯ ತಾಲೂಕ ಅಧಿಕಾರಿ ನಟರಾಜ ವಸತಿ ನಿಲಯ ವಿದ್ಯಾರ್ಥಿಗಳಿಗೆ ಕಳಪೆ ಆಹಾರ ನೀಡುತ್ತಿರುವ ಬಗ್ಗೆ ಮಾಹಿತಿ ಬಂದಿದೆ ಎಂದು ಮಾನ್ವಿ ಶಾಸಕ ಹಂಪಯ್ಯ ನಾಯಕ ಪುತ್ರ ಶಿವರಾಜ ನಾಯಕ ವಕೀಲ ಗಂಭೀರವಾಗಿ ಆರೋಪಿಸಿದ್ದಾರೆ.

ರಾಯಚೂರು ಜಿಲ್ಲೆಯ ಮಾನ್ವಿ ಪಟ್ಟಣದ ಶಾಸಕರ ಭವನದ ಮುಂದೆ ರೈತ ಸಂಘದ ಮುಖಂಡರು ಹಮ್ಮಿಕೊಂಡಿದ್ದ ಪ್ರತಿಭಟನೆಯಲ್ಲಿ ಭಾಗವಹಿಸಿ, ಮಾನ್ವಿ ಸಮಾಜ ಕಲ್ಯಾಣ ಇಲಾಖೆಯ ತಾಲೂಕ ಅಧಿಕಾರಿ ನಟರಾಜ ಮತ್ತು ಪರಿಶಿಷ್ಟ ಪಂಗಡ ಇಲಾಖೆಯ ತಾಲೂಕ ಅಧಿಕಾರಿ ಮಹಾಲಿಂಗಪ್ಪ ಇಂಗಳದಾಳ ತಮ್ಮ ಸಂಬಂಧಿಕರ ವ್ಯಯಕ್ತಿಕ ಖಾತೆಗೆ ಅನುದಾಳ ಬಳಕೆ ಮಾಡಿ ಕೊಂಡಿರುವ ಮಾಹಿತಿ ಇದೆ ಎಂದು ಕಿಡಿಕಾರಿದರು.

ಮಾನ್ವಿ ಸಮಾಜ ಕಲ್ಯಾಣ ಇಲಾಖೆ ತಾಲೂಕ ಅಧಿಕಾರಿ ನಟರಾಜ ಮತ್ತು ಪರಿಶಿಷ್ಟ ಪಂಗಡ ಇಲಾಖೆಯ ತಾಲೂಕ ಅಧಿಕಾರಿ ಮಹಾಲಿಂಗಪ್ಪ ಇಂಗಳದಾಳ್ ವಿರುದ್ಧ ಸೂಕ್ತ ಕ್ರಮ ಜರುಗಿಸುವಂತೆ ಹಿರಿಯ ಅಧಿಕಾರಿಗಳಿಗೆ ಸೂಚಿಸಿ ಶಾಸಕ ಹಂಪಯ್ಯ ನಾಯಕ ಮತ್ತು ಸಚಿವ ಬೋಸರಾಜು ಅವರಿಗೆ ಮಾಹಿತಿ ತಿಳಿಸಲಾಗುವುದು ಎಂದರು.

**ತಾಲೂಕ ವರದಿಗಾರರು, ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂ ಎಸ್.ಕೆ ನ್ಯೂಸ್ ಚಾನೆಲ್:**
**ಹುಸೇನ್.ಭಾಷಾ.ನಕ್ಕುಂದಿ.ಮಾನ್ವಿ**

# ಶಿಕ್ಷಣದಿಂದ ಮಾತ್ರ ಸುಧಾರಣೆ ಸಾಧ್ಯ: ಸತೀಶ ಜಾರಕಿಹೊಳಿ

**ರಬಕವಿ–ಬನಹಟ್ಟಿ :** ಶಿಕ್ಷಣದಿಂದ ಮಾತ್ರ ಸಮಾಜ ಸುಧಾರಣೆ ಸಾಧ್ಯವಾಗುತ್ತದೆ. ಶಿಕ್ಷಣದಿಂದ ಸಂಘಟನೆಯು ಬೆಳೆಯುತ್ತದೆ.ಶಿಕ್ಷಣ ಸಂಘಟನೆ ಹೋರಾಟ ಇವು ಸಮಾಜದ ದೇಯವಾಗಬೇಕು ಎಂದು ಲೋಕೋಪಯೋಗಿ ಸಚಿವ ಸತೀಶಜಾರಕಿಹೊಳಿ ಹೇಳಿದರು.ಅವರು ಇಲ್ಲಿಯ ದಾನೇಶ್ವರಿ ಕಲ್ಯಾಣ ಮಂಟಪದಲ್ಲಿ ಜರುಗಿದ ಶಿವ ಶರಣ ನೂಲಿ ಚಂದಯ್ಯನವರ 918 ನೇ ಜಯಂತಿ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು. ಬಜಂತ್ರಿ ಸಮಾಜ ಅತ್ಯಂತ ಹಿಂದುಳಿದ ಸಮಾಜ ಅದಕ್ಕೆ ಸೂಕ್ತ ಸ್ಥಾನಮಾನ ಕೊಡಲಾಗುವುದು ಎಂದು ಅವರು ಹೇಳಿದರು. ತೇರದಾಳ ಮತಕ್ಷೇತ್ರದ ಶಾಸಕ ಸಿದ್ದು ಸವದಿ ಅವರು ಮಾತನಾಡುತ್ತ ನೂಲಿ ಚಂದಯ್ಯ ಕಾಯಕದ ಮಹತ್ವ ಜಗತ್ತಿಗೆ ಸಾರಿದವ.



ಕಾಯಕದ ಮಹತ್ವ ಹೇಳಿದವ. ಅಂತ ಜಮಾಜದಲ್ಲಿ ಹುಟ್ಟಿದ ಜನ ಅತ್ಯಂತ ಪ್ರಾಮಾಣಿಕರು. ಎಂದು ಹೇಳಿದರು. ಅಲೆಮಾರಿ ನಿಗಮದ ಅಧ್ಯಕ್ಷೆ ಜಿ.ಪಲ್ಲವಿ, ಕೆ.ಪಿ.ಸಿ.ಸಿ. ರಾಜ್ಯ ಪ್ರದಾನ ಕಾರ್ಯದರ್ಶಿ ವೀಣಾ ಕಾಶಪ್ಪನವರ, ಕಾಂಗ್ರೆಸ್ ನಾಯಕ ಸಿದ್ದು ಕೊಣ್ಣೂರ, ಮಾತನಾಡಿದರು. ಬ್ರಹ್ಮಾನಂದ ಆಶ್ರಮದ ಗುರುಸಿದ್ದೇಸ್ವರ ಸ್ವಾಮೀಜಿ,ಬೆಳಗಲಿಯ ಸಿದ್ದರಾಮ ಶಿವಯೋಗಿಗಳು, ಕಣದಾಳದ ರಾಮಣ್ಣ ಮಹಾರಾಜರು,ನಿಹಾಲ ಅಪ್ಪಾಜಿ, ಸಾನಿದ್ಯ ವಹಿಸಿದ್ದರು. ತಹಶೀಲ್ದಾರ ಗಿರೀಶ ಸ್ವಾದಿ, ಬೆಂಗಳೂರಿನ ಸಿ.ಪಿ.ಯ. ಹನಮಂತ ಬಜಂತ್ರಿ, ನಗರಸಭೆಯ ಅಧ್ಯಕ್ಷೆ ವಿದ್ಯಾ ದಬಾಡಿ,ಸದಸ್ಯರಾದ ಶೋಭಾ ಗಾಡಿವಡ್ಡರ, ಅರುಣ ಬುದ್ನಿ, ರಾಘವೇಂದ್ರ ನೀಲನ್ನವರ ಮಾತನಾಡಿದರು. ಜಿ.ಮಾದೇಶ ಪ್ರಾಸ್ತಾವಿಕವಾಗಿ ಮಾತನಾಡಿದರು. ಯಶವಂತ ವಾಜಂತ್ರಿ, ಡಾ.ಚಂದ್ರಕಾಂತ ಹೊಸೂರ ಕಾರ್ಯಕ್ರಮ ನಿರ್ವಹಿಸಿದರು. ನಾಗರಾಜ ಬಜಂತ್ರಿ ವಂದಿಸಿದರು.

# ಅತಿವೃಷ್ಟಿ ಗೆ ಹಾನಿಗೆ ಒಳಗಾದ ರೈತರಿಗೆ ಬೆಳೆಗಳ ಸೂಕ್ತ ಪರಿಹಾರ ನೀಡಲು ಸರಕಾರಕ್ಕೆ ಆಗ್ರಹ


## ಮತಕ್ಷೇತ್ರದಲ್ಲಿ ಸಂಪೂರ್ಣ ಪಾರದರ್ಶಕ ಸರ್ವೆ ಮಾಡಿ ಪರಿಹಾರ ಒದಗಿಸಬೇಕೆಂದು ಸರಕಾರಕ್ಕೆ ಒತ್ತಾಯ: ಮಾಜಿ ಶಾಸಕ ನಡಹಳ್ಳಿ

**ಮುದ್ದೇಬಿಹಾಳ :** ಮುದ್ದೇಬಿಹಾಳ ವಿಧಾನಸಭಾ ಕ್ಷೇತ್ರ ಒಂದರಲ್ಲಿ 1.24 ಲಕ್ಷ ಸಾವಿರ ಹೆಕ್ಟೇರ್ ಭೂಮಿ ಸರ್ವೆ ಆಗಬೇಕು ಪ್ರತಿ ಎಕರೆ ಭೂಮಿಗೆ ರೈತರಿಗೆ ಪರಿಹಾರ ಕೊಡಬೇಕು ಒಂದೆರಡು ಎಕರೆಗೆ ಅಲ್ಲಾ ಮತಕ್ಷೇತ್ರದಲ್ಲಿ ಸಂಪೂರ್ಣ ಪಾರದರ್ಶಕ ಸರ್ವೆ ಮಾಡಿ ಪರಿಹಾರ ಒದಗಿಸಬೇಕೆಂದು ಬಿಜೆಪಿ ರೈತ ಮೋರ್ಚಾದ ರಾಜಾಧ್ಯಕ್ಷ ಹಾಗೂ ಮಾಜಿ ಶಾಸಕ ಎ.ಎಸ್ ಪಾಟೀಲ್ ನಡಹಳ್ಳಿ ರಾಜ್ಯ ಕಾಂಗ್ರೆಸ್ ಸರಕಾರಕ್ಕೆ ಆಗ್ರಹಿಸಿದರು ಶುಕ್ರವಾರ ಸಂಜೆ ತಮ್ಮ ತೋಟದ ಮನೆಯಲ್ಲಿ ಪತ್ರಿಕಾಗೋಷ್ಠಿ ನಡೆಸಿ ಮಾತನಾಡಿದ ಅವರು ಸರ್ವೆ ಮಾಡಿದ ಮಾಹಿತಿಯನ್ನು ಗ್ರಾಪಂ ಗಳಲ್ಲಿ ಅಂಟಿಸಬೇಕು ಆನ್ಲೈನ್ ನಲ್ಲಿ ಸರ್ವೆ ನಂಬರ್, ರೈತರ ಹೆಸರು ಪರಿಹಾರದ ಮಾಹಿತಿ ಒದಗಿಸಬೇಕು ನಮ್ಮ ವಿಜಯಪುರ ಜಿಲ್ಲೆಯಲ್ಲಿ ಇಬ್ಬರೂ ಸಚಿವರು ಒಬ್ಬರು ಜಿಲ್ಲೆಯ ಉಸ್ತುವಾರಿ ಸಚಿವರಿದ್ದಾರೆ ಕಾಂಗ್ರೆಸ್ ಪಕ್ಷದ ಶಾಸಕರಿದ್ದು ಅಧಿಕಾರಿಗಳಿಗಿಂತ ಹೆಚ್ಚಿನ ಜವಾಬ್ದಾರಿ ಇವರಮೇಲಿದೆ ರೈತರಿಗೆ ನ್ಯಾಯ ಒದಗಿಸುವ ಕೆಲಸವನ್ನು ಮಾಡಬೇಕು ರೈತರು ಇದು ನಿಮ್ಮ ಹಕ್ಕಾಗಿದೆ ಯಾವ ಮುಲಾಜಿಲ್ಲದೆ ಪರಿಹಾರವನ್ನು ಪಡೆಯಬೇಕು ಬೆಳೆಹಾನಿ ಕುರಿತು ಸಮೀಕ್ಷೆ ಮಾಡಿಸಿ ನಿಮ್ಮ ಬೆಳಹಾನಿ ಕುರಿತು ಆನ್ಲೈನ್ ನಲ್ಲಿ ಚೆಕ್ ಮಾಡಿಕೂಳ್ಳಿ ಎಂದು ಕರೆ ನೀಡಿದರು.

ಇದು ರಾಜಕಾರಣ ಮಾಡುವ ಸಂದರ್ಭವಲ್ಲಾ ರೈತರು ಕಷ್ಟದಲ್ಲಿದ್ದಾರೆ ಅವರಿಗೆ ಸಹಾಯ ಮಾಡಬೇಕು ಈ ಮುಂಚೆ ಪತ್ರಿಕಾಗೋಷ್ಠಿ ನಡೆಸಿ ಅತಿವೃಷ್ಟಿ ಗೆ ಹಾನಿಗೆ ಒಳಗಾದ ರೈತರಿಗೆ ಬೆಳೆ ಪರಿಹಾರ ನೀಡಲು ದಸರಾ ಹಬ್ಬದ ವರಗೆ ಗಡವು ನೀಡಿದ್ದೆ ಅವರು ಪರಿಹಾರ ಒದಗಿಲ್ಲ ಹೀಗಾಗಿ ಮತಕ್ಷೇತ್ರದ ಪ್ರತಿ ಹಳ್ಳಿಗಳಿಗೆ ಬೇಟಿ ನೀಡ್ತನೆ ಪ್ರವಾಸ ಮಾಡ್ತನೆ ಡಿಸಿ,ತಹಶಿಲ್ದಾರ ಪ್ರತಿ ಹಳ್ಳಿಗಳಿಗೆ ಹೋಗಬೇಕು ತಲಾಟಿ, ಪಿಡಿಓ ಕಂದಾಯ ಕೃಷಿ ಅಧಿಕಾರಿಗಳು ಗ್ರಾಮೀಣ ಪ್ರದೇಶಗಳಲ್ಲಿ ವಾಸ್ತವ್ಯ ಮಾಡಿ ಸರ್ವೆ ಮಾಡಿಸಬೇಕು ಜಮೀನಿನುಗಳಲ್ಲಿ ನೀರು ನಿಂತಿವೆ ಅಂದರೆ ಒಂದು ವಾರ ಸಮಯ ತಗೆದುಕೂಂಡಾದರೂ ಸರ್ವೆ ಮಾಡಬೇಕು ಇಲ್ಲದೆ ಇದ್ದರೆ ಅಧಿಕಾರಿಗಳನ್ನು ಹೊಣೆ ಮಾಡುವುದಿಲ್ಲ ಸ್ಥಳೀಯ ಶಾಸಕರು ಹೊಣೆ ಮಾಡ್ತನೆ ಒಬ್ಬ ರೈತನು ಪರಿಹಾರದಿಂದ ವಂಚಿತವಾಗಲು ಈ ನಡಹಳ್ಳಿ ಬಿಡುವುದಿಲ್ಲವೆಂದು ಎಚ್ಚರಿಕೆ ನೀಡಿದರು.

ಸ್ಥಳೀಯ ಶಾಸಕ ಅಪ್ಪಾಜಿ ನಾಡಗೌಡರು ಚುನಾವಣೆಯಲ್ಲಿ ಮತಹಾಕಿದ ಜನಕ್ಕೆ ಕೃತಜ್ಞತೆ ಹೇಳಲು ಹೋಗಿಲ್ಲ ಈಗಲಾದರೂ ಪ್ರತಿ ಹಳ್ಳಿಗಳಿಗೆ ಹೋಗಿ ರೈತರ ಜೊತೆ ಚರ್ಚೆ ಮಾಡಿ ಸಭೆಗಳನ್ನು ಮಾಡಿ ಹಾನಿಗೂಳಗಾದ ಪ್ರದೇಶದ ರೈತರಿಗೆ ಪರಿಹಾರ ಒದಗಿಸಲು ಈ ಮೂಲಕ ಆಗ್ರಹ ಪಡಿಸುತ್ತೇನೆ ಎಂದರು.

ಪತ್ರಿಕಾಗೋಷ್ಠಿಯಲ್ಲಿ ಮಂಡಲ ಅಧ್ಯಕ್ಷ ಜಗದೀಶ ಪಂಪಣ್ಣನವರ, ಬಿಜೆಪಿ ರೈತ ಮೋರ್ಚಾ ತಾಲ್ಲೂಕು ಅಧ್ಯಕ್ಷ ಎಸ್ ಎಸ್ ಶಿವಣಗಿ, ಬಿಜೆಪಿ ಯುವ ಮೋರ್ಚಾ ತಾಲ್ಲೂಕು ಅಧ್ಯಕ್ಷ ಗಿರೀಶಗೌಡ ಪಾಟೀಲ್, ಅಶೋಕ ರಾಠೋಡ,ಹರೀಶ ನಾಟಿಕಾರ, ಸಂಜು ಬಾಗೇವಾಡಿ, ನಾಗೇಶ ಕವಡಿಮಟ್ಟಿ, ರೇಖಾ ಕಂಡಗೂಳಿ ಸೇರಿದಂತೆ ಭಾಗವಹಿಸಿದ್ದರು.



ಸಿಎಂ ಸಿದ್ದ ರಾಮಯ್ಯ ಉ.ಕ 12 ಜಿಲ್ಲೆಗಳಲ್ಲಿ 10 ಲಕ್ಷ ಹೆಕ್ಟೇರ್ ಹಾನಿ ಆಗಿದೆ ಹೇಳಿದ್ದಾರೆ ಅಂದರೆ 1 ಜಿಲ್ಲೆಗೆ 80 ಸಾವಿರ ಹೆಕ್ಟೇರ್ ಆಗುತ್ತದೆ 8 ವಿಧಾನಸಭಾ ಕ್ಷೇತ್ರಕ್ಕೆ 10 ಸಾವಿರ ಹೆಕ್ಟೇರ್ ಆಗುತ್ತದೆ ನಮ್ಮ ಮುದ್ದೇಬಿಹಾಳ ವಿಧಾನಸಭಾ ಕ್ಷೇತ್ರ ಒಂದರಲ್ಲಿ 1.24 ಲಕ್ಷ ಸಾವಿರ ಹೆಕ್ಟೇರ್ ಬೆಳೆಹಾನಿ ಆಗಿದೆ ವಿಜಯಪುರ ಜಿಲ್ಲೆಯಲ್ಲಿ ಅತಿಹೆಚ್ಚು ಮಳೆ ತಾಳಿಕೋಟಿ ಮತ್ತು ತಿಕೋಟಾ ಭಾಗದಲ್ಲಿ ಆಗಿದೆ.

ಅಕ್ಟೋಬರ್ 6 ರಿಂದ ಸ್ವತಃ ನಾನು ಮತಕ್ಷೇತ್ರದ ಪ್ರತಿ ರೈತರ ಹೂಲಕ್ಕೆ ಗ್ರಾಮಗಳಿಗೆ ಪ್ರವಾಸ ಮಾಡುತ್ತೇನೆ ಅ6 ನಾಲತವಾಡ ಹೋಬಳಿ, ಅ7 ಢವಳಗಿ ಹೋಬಳಿ, ಅ8 ಮುದ್ದೇಬಿಹಾಳ ಹೋಬಳಿ ಪ್ರವಾಸ ಮಾಡುತ್ತೇನೆ ,
ನನ್ನ ಹೋರಾಟದ ಫಲವಾಗಿ ಕುಂಚಗನೂರು ಗ್ರಾಮದಲ್ಲಿ ಮೊಸಳೆ ದಾಳಿಗೆ ಬಲಿಯಾದ ರೈತನಿಗೆ ಇಂದು20 ಲಕ್ಷ ರೂ ಪರಿಹಾರ ಸಿಕ್ಕಿದೆ ಮೃತರೈತನ ಕುಟುಂಬಕ್ಕೆ ಪರಿಹಾರ ಸಿಗದಂತೆ ಮರಣೋತ್ತರ ಪರೀಕ್ಷೆಯ ರಿಪೋರ್ಟ್ ತಡೆಹಿಡಿಯಲಾಯಿತು ಪರಿಹಾರಕ್ಕೆ ನೂರೆಂಟು ನೆಪಮಾಡಿದರು ನಾ ಬಿಡದೆ ಪರಿಹಾರ ಒದಗಿಸಿದ್ದೇನೆ ,ಡೋಣಿ ನದಿಯಲ್ಲಿ ಸಂತೋಷ ಹಡಪದ ಎಂಬ ಯುವಕ ಮೃತಪಟ್ಟರು ಉಸ್ತುವಾರಿ ಸಚಿವರು ಈ ಭಾಗದಲ್ಲಿ ಜೀವಹಾನಿ ಆಗಿಲ್ಲವೆಂದು ಹೇಳಿಕೆ ನೀಡಿದರು, ಮೃತ ಯುವಕನ ಕುಟುಂಬಕ್ಕೆ ಸ್ವಾಂತನ ಹೇಳಲಿಲ್ಲ ಘಟನಾ ಸ್ಥಳಕ್ಕೆ ಸ್ಥಳೀಯ ಶಾಸಕರು ಸಚಿವರು ನೀಡಲಿಲ್ಲ ನಾನು ಭೇಟಿ ಅಧಿಕಾರಿಗಳ ಮೇಲಿನ ಒತ್ತಡ ಹೇರಿದ ಕಾರಣ ಮೃತ ಯುವಕನ ಶವ ಸಿಕ್ಕಿತು.

। ಎ.ಎಸ್ ಪಾಟೀಲ್ ನಡಹಳ್ಳಿ
ಬಿಜೆಪಿ ರೈತ ಮೋರ್ಚಾ ರಾಜ್ಯ ಅಧ್ಯಕ್ಷ ಹಾಗೂ ಮಾಜಿ ಶಾಸಕರು.

# ಮನಸ್ಸನ್ನು ನಿಯಂತ್ರಿಸುವ ಶಕ್ತಿ ಸಾಹಿತ್ಯಕ್ಕಿದೆ: ಬಸರಕೋಡ

**ಬಾಗಲಕೋಟೆ:** ಕನ್ನಡ ಸಾಹಿತ್ಯ ಶ್ರೇಷ್ಠವಾದದ್ದು. ಇಂದಿನ ಕಾಲಘಟ್ಟದಲ್ಲಿ ಟೆಕ್ನಾಲಜಿ ಹಿಂದೆ ಓಡುತ್ತಾ ನಮ್ಮ ನೆಲದ ಶ್ರೇಷ್ಠಯತೆಯನ್ನು ಮರೆಯುತ್ತಿದ್ದೇವೆ. ದೇಶದ ಸಾಹಿತ್ಯಕ್ಕೆ ಕನ್ನಡದ ಕೊಡುಗೆ ಅಪಾರವಾಗಿದೆ. ಮನಸ್ಸಿನ ಸ್ವಾಸ್ಥ್ಯ ಕಾಪಾಡುವಂತ ಮತ್ತು ನಿಯಂತ್ರಿಸುವ ಶಕ್ತಿ ಸಾಹಿತ್ಯಕ್ಕೆಯಿದೆ ಎಂದು ಕರ್ನಾಟಕ ಸಾಹಿತ್ಯ ಅಕಾಡೆಮಿಯ ಸದಸ್ಯರಾದ ಡಾ. ಮಹಾದೇವ ಬಸರಕೋಡ ಹೇಳಿದರು.

ನಗರದ ಬಿ.ವಿ.ವಿ.ಸಂಘದ ಬಸವೇಶ್ವರ ಕಲಾ ಮಹಾವಿದ್ಯಾಲಯದ ವಿಚಾರ ಸಂಕಿರಣ ಕೊಠಡಿಯಲ್ಲಿ ಶನಿವಾರದಂದು ಹಮ್ಮಿಕೊಂಡಿದ್ದ ಎಂ.ಎ. ಪ್ರಥಮ ವರ್ಷದ ವಿದ್ಯಾರ್ಥಿಗಳ ಸ್ವಾಗತ ಮತ್ತು ಕನ್ನಡ ನುಡಿ ವೇದಿಕೆ ಕಾರ್ಯ ಚಟುವಟಿಕೆಗಳ ಕಾರ್ಯಕ್ರಮವನ್ನು ಸಸಿಗೆ ನೀರು ಎರೆಯುವುದರ ಮೂಲಕ ಉದ್ಘಾಟನೆ ಮಾಡಿ ಮಾತನಾಡಿದರು.

ಕನ್ನಡದಲ್ಲಿರುವ ವಚನ, ದಾಸ, ಹಾಗೂ ಜನಪದ ಸಾಹಿತ್ಯ ತನ್ನದೇ ಆದ ಶ್ರೇಷ್ಠತೆಯನ್ನು ಹೊಂದಿದೆ. ಪಂಪ, ರನ್ನ, ಕುಮಾರವ್ಯಾಸರು ತಮ್ಮ ಸಾಹಿತ್ಯದ ಮೂಲಕ ಮನುಷ್ಯನ ನಿಜವಾದ ಗುಣಸ್ವಭಾವ ಬಗ್ಗೆ ವಿವರಿಸಿದ್ದಾರೆ. ಇಂತಹ ಸಮಾಜದಲ್ಲಿ ನಾವು ಇಂದು ಹಣ ಸಂಪಾದನೆಯೇ ಶ್ರೇಷ್ಠವೆಂದು ತಿಳಿದು ನಮ್ಮಲ್ಲಿರುವ ಮಾನವೀಯತೆನ್ನು ಮರೆತು ಜೀವನಕ್ಕೆ ನಿಜವಾಗಿ ಬೇಕಾದದ್ದನ್ನು ಬಿಟ್ಟು ಬೇಡವಾಗಿರುವುದರ ಹಿಂದೆ ಹೋಗುತ್ತಿದ್ದೇವೆ. ಅಲ್ಲದೆ ಸಮಾಜದಲ್ಲಿ ಭ್ರಷ್ಟಾಚಾರ ಹೆಚ್ಚಾಗಿದ್ದು ಇದನ್ನು ತಡೆಯಲು ಮತ್ತು ಸಮಾಜವನ್ನು ತಿದ್ದುವಂತಹ ಸಾಮರ್ಥ್ಯ ಸಾಹಿತ್ಯಕ್ಕೆಯಿದೆ ಎಂದರು. ಪ್ರಾಚಾರ್ಯರಾದ ಎಸ್. ಆರ್. ಮೂಗನೂರಮಠ ಮಾತನಾಡಿ ಕವಿತ್ವ ಮತ್ತು ಸ್ವಹೃದಯ ಎರಡು ಒಂದೇ ವೀಣೆಯಂತೆ. ಕನ್ನಡ ಸಾಹಿತ್ಯದಲ್ಲಿ ಬೇರೆ ವಿಷಯದವರ ಕೂಡುಗೆಯೂ ಇದೆ. ಪಾರಿಭಾಷಿಕ ಪದಗಳ ಸಂಗ್ರಹ ಕಡಿಮೆಯಾಗಿದೆ. ಸಂಸ್ಕೃತಿ ಎನ್ನುವುದು ಕಠಿಣ ಭಾಷೆಯಾಗಿತ್ತು. ಜಗತ್ತು ಬದಲಾವಣೆಯಗವೇಕೆಂದರೆ ಅದು ಸಾಹಿತ್ಯದ ಸಹಾಯದಿಂದ. ಸಾಹಿತ್ಯವನ್ನು ಕಣ್ಣುಗಳಿಂದ ಅಷ್ಟೇ ಅಲ್ಲಾ ಮೆದುಳಿನಿಂದ ಸಹ ಓದುದುವುದು ಅವಶ್ಯಕ ಇದರಿಂದ ಹ್ಯಾಪಿನೆಸ್ ಹಾರ್ಮೋನ್ ಬಿಡುಗಡೆಯಗುತ್ತದೆ. ಓದುವುದು ಅಮುಲು ಇದ್ದಂತೆ ಎಂದರು.

ಈ ಕಾರ್ಯಕ್ರಮದಲ್ಲಿ ಕನ್ನಡ ಸ್ನಾತಕೋತ್ತರ ವಿಭಾಗದ ಸಂಯೋಜಕರಾದ ಡಾ. ವೀಣಾ ಕಲ್ಮಠ , ಪ್ರಾಧ್ಯಾಪಕರಾದ ಡಾ. ಬಸವರಾಜ ಕುಂಬಾರ, ಡಾ.ಎಸ್.ಡಿ.ಕೆಂಗಲಗುತ್ತಿ, ಶ್ರೀ ಹರಿ ದೂಘದಸೇರಿದಂತೆ ಬೋಧಕ–ಭೋಧಕೇತರ ಸಿಬ್ಬಂದಿ ಹಾಗೂ ವಿದ್ಯಾರ್ಥಿಗಳು ಉಪಸ್ಥಿತ–ರಿದ್ದರು.




# ಔಷಧಶಾಸ್ತ್ರದ ವಿದ್ಯಾರ್ಥಿಗಳಿಗೆ ವಿಪುಲ್ ಅವಕಾಶ: ಔಷಧ ವಿಜ್ಞಾನ ಕ್ಷೇತ್ರಕ್ಕೆ ಭಾರತದ ಕೊಡುಗೆ ಅಪಾರ: ಡಾ. ಅಜೀತಕುಮಾರ ಸಕ್ಸೆನಾ

**ಬಾಗಲಕೋಟೆ:** ಔಷಧವಿಜ್ಞಾನಕ್ಷೇತ್ರಕ್ಕೆಭಾರತದ ಕೊಡುಗೆ ಅಪಾರವಾಗಿದ್ದು ಔಷಧಶಾಸ್ತ್ರದ ವಿದ್ಯಾರ್ಥಿಗಳಿಗೆ ವಿಪುಲ್ ಅವಕಾಶಗಳಿವೆ ಎಂದು ಜಮ್ಮುವಿನ ಸಿಎಸ್ಐಆರ್ ಇಂಡಿಂ–ಯನ್ ಇನ್ಸಿಟ್ಯೂಟ್ ಆಫ್ ಇಂಟಿಗ್ರೇಟಿವ್ ಮೆಡಿಸಿನ್, ಕ್ಯಾನ್ಸರ ಔಷಧಶಾಸ್ತ್ರ ವಿಭಾಗದ ಮಾಜಿ ಮುಖ್ಯಸ್ಥರು ಹಾಗೂ ವಿಜ್ಞಾನಿಗಳಾದ ಡಾ. ಅಜೀತಕುಮಾರ ಸಕ್ಸೆನಾ ಹೇಳಿದರು

ನಗರದ ಬ.ವಿ.ವ.ಸಂಘದ ಹಾನಗಲ್ ಶ್ರೀ ಕುಮಾರೇಶ್ವರ ಔಷಧ ವಿಜ್ಞಾನ ಮಹಾವಿದ್ಯಾಲಯದಿಂದ ಶನಿವಾರ ಬ.ವಿ.ವಿ.ಸಂಘದ ನೂತನ ಸಭಾಭವನದಲ್ಲಿ ನಡೆದ ಬಿ. ಫಾರ್ಮಾ,ಎಮ್.ಫಾರ್ಮ ಹಾಗೂ ಫಾರ್ಮ.ಡಿ ಕೋರ್ಸಿನ ಘಟಿಕೋತ್ಸವ ಕಾರ್ಯಕ್ರಮದಲ್ಲಿ ಪದವಿ ಪ್ರಧಾನ ಮಾಡಿ ಮಾತನಾಡಿದ ಅವರು ಅನೇಕ ದೇಶಗಳಿಗೆ ಭಾರತ ಔಷಧಗಳನ್ನು ರಫ್ತು ಮಾಡುವ ಮೂಲಕ ಔಷಧ ವಿಜ್ಞಾನ ಕ್ಷೇತ್ರಕ್ಕೆ ಭಾರತದ ಕೊಡುಗೆ ಮಹತ್ವದ್ದಾಗಿದೆ, ಪದವೀಧರು ತಮ್ಮ ಜ್ಞಾನವನ್ನು ನಿರಂತರವಾಗಿ ನವೀಕ–ರಿಸಿಕೊಂಡು ಔಷಧ ಗುಣಮಟ್ಟ ಮತ್ತು ಮಾನದಂಡಗಳನ್ನು ಕಾಯ್ದುಕೊಳ್ಳುವ ಮತ್ತು ಗುಣಮಟ್ಟವನ್ನು ಪಾಲಿಸುವಲ್ಲಿ ಔಷಧಾಲಯ ಪದವೀಧರರುವಹಿಸುವಪಾತ್ರಮಹತ್ವದಾಗಿದೆ, ಔಷಧಶಾಸ್ತ್ರದವರಿಗೆ ಬೇರೆ ಬೇರೆ ಕ್ಷೇತ್ರದಲ್ಲೂ ಉದ್ಯೋಗ ಅವಕಾಶಗಳಿವೆ ಎಂದರು.

ಮುಖ್ಯಅತಿಥಿಯಾಗಿಬೆಂಗಳೂರಿನಇನ್ನುವೆಲ್ ಬಯೋಸೈನ್ಸ್ ಪ್ರೈ.ಲಿ.ನ
ಡಾ. ಕೊಟೆಪ್ಪಾ ಪರಿ ಮಾತನಾಡಿ ಎಲ್ಲ ಪದವಿ ವಿದ್ಯಾರ್ಥಿಗಳಿಗೆ ವಿಪುಲ ಉದ್ಯೋಗ ಅವಕಾಶಗಳಿವೆ, ಸಿಕ್ಕ ಅವಕಾಶವನ್ನು ಸದುಪಯೋಗ ಪಡೆದುಕೊಳ್ಳಬೇಕು ಎಂದರು ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಸಿ ಮಾತನಾಡಿದ ಬ.ವಿ.ವಿ.ಸಂಘದ, ಗೌರವ ಕಾರ್ಯದರ್ಶಿ ಮಹೇಶ ಅಥಣಿ ಅವರು ಸಂಘದ ಕಾರ್ಯಾದ್ಯಕ್ಷರಾದ
ಡಾ.ವೀರಣ್ಣ ಚರಂತಿಮಠ ಅವರ ಮಾರ್ಗದರ್ಶನದಲ್ಲಿ ಈ ಔಷಧ ಮಹಾವಿದ್ಯಾಲಯ ಅತ್ಯಾಧುನಿಕ ಸೌಲಭ್ಯಗಳನ್ನೊಳಗೊಂಡು ಗುಣಮಟ್ಟದ ಶಿಕ್ಷಣ ನೀಡುತ್ತಿರುವುದರಿಂದ ಇಲ್ಲೆ ಬೇಡಿಕೆ ಹೆಚ್ಚಾಗಿದೆ, ಈ ಭಾಗದ ವಿದ್ಯಾರ್ಥಿಗಳಿಗೆ ಅನುಕೂಲವಾಗಿದೆ ಎಂದರು.

ವೇದಿಕೆ ಮೇಲೆ ಹಾನಗಲ್ ಶ್ರೀ ಕುಮಾರೇಶ್ವರ ಔಷಧ ವಿಜ್ಞಾನ ಮಹಾವಿದ್ಯಾಲಯದ ಕಾರ್ಯಾಧ್ಯಕ್ಷರಾದ ಮಲ್ಲಿಕಾರ್ಜುನ ಎಸ್.ಸಾಸನೂರ ಡಾ. ವೈ. ಶ್ರೀನಿವಾಸ ಪ್ರಾಚಾರ್ಯರು ಇದ್ದರು. ಪದವಿ ಪ್ರಧಾನ: 105 ಬಿ,ಫಾರ್ಮ ವಿದ್ಯಾರ್ಥಿಗಳಿಗೆ ಹಾಗೂ 38 ಎಮ್.ಫಾರ್ಮ,18ಫಾರ್ಮಡಿವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಲಾಯಿತು.

ಕಾರ್ಯಕ್ರಮದಲ್ಲಿ ಸಂಘದ ಸದಸ್ಯರು ಹಾಗೂ ವಿವಿಧ ಮಹಾವಿದ್ಯಾಲಯಗಳ ಆಡಳಿತ ಮಂಡಳಿ ಪದಾಧಿಕಾರಿಗಳು. ವಿದ್ಯಾರ್ಥಿಗಳು,ಫಾಲಕರು, ಪವೈದ್ಯರು ಹಾಗೂ ಸಿಬ್ಬಂದಿ ವರ್ಗ ಉಪಸ್ಥಿತರಿದ್ದರು.





# ಸಮೀಕ್ಷೆಯತ್ತ ಪುರಸಭೆ ಸಿಬ್ಬಂದಿ, ಕಚೇರಿ ಭಣ ಭಣ

**ಕುಷ್ಟಗಿ :** ಹಿಂದುಳಿದ ವರ್ಗಗಳ ಇಲಾಖೆಯಿಂದ ನಡೆಯುತ್ತಿರುವ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಗೆ ಇಲ್ಲಿಯ ಪುರಸಭೆಯ ಎಲ್ಲ ಸಿಬ್ಬಂದಿ ತೆರಳಿದ್ದರಿಂದ ಅಧಿಕಾರಿ, ಸಿಬ್ಬಂದಿ ಇಲ್ಲದೇ ಕಚೇರಿ ಭಣಗುಡುತ್ತಿದ್ದುದು ಶುಕ್ರವಾರ ಕಂಡುಬಂದಿತು.

ವಿದ್ಯುತ್ ಸಂಪರ್ಕದ ಆರ್.ಆರ್ ಸಂಖ್ಯೆ ಹೊಂದಿರುವ ಪಟ್ಟಣದ 23 ವಾರ್ಡುಗಳಿಗೆ ಜಿಪಿಎಸ್ ಆಧಾರಿತ ಜಿಯೊ ಟ್ಯಾಗ್ ಮಾಡಿ ಯುಎಚ್ಐಡಿ ಸಂಖ್ಯೆಯನ್ನೂ ನಮೂದಿಸಲಾಗಿದೆ. ಆದರೆ ಜಿಯೊ ಟ್ಯಾಗ್ ಮಾಡಿದ ಆರ್ಆರ್ ಸಂಖ್ಯೆ ಮನೆಗಳು ಮಾತ್ರ ಬೇರೆ ಬೇರೆ ವಾರ್ಡುಗಳಲ್ಲಿರುವುದರಿಂದ ಸಮೀಕ್ಷೆದಾರರ ಕರ್ತವ್ಯಕ್ಕೆ ಅಡ್ಡಿಯಾಗಿತ್ತು. ಇದರಿಂದ ಸಮೀಕ್ಷೆ ನಿಗದಿತ ಅವಧಿಯಲ್ಲಿ ಮುಗಿಯುವುದೇ ಅನುಮಾನ ಎಂದರಿತ ಅಧಿಕಾರಿಗಳು ಮನೆಗಳನ್ನು ಪತ್ತೆಹಚ್ಚುವ ಕೆಲಸಕ್ಕೆ ಪುರಸಭೆ ಸಿಬ್ಬಂದಿ ನೆರವು ಪಡೆಯುತ್ತಿದ್ದಾರೆ. ಹಾಗಾಗಿ ಕರ್ತವ್ಯದಲ್ಲಿರುವ ಪುರಸಭೆಯ ಮುಖ್ಯಾಧಿಕಾರಿ ಸಹಿತ ಎಲ್ಲ ಸಿಬ್ಬಂದಿ ಮನೆಗಳ ಪತ್ತೆ ಕಾರ್ಯಕ್ಕೆ ಸಮೀಕ್ಷಕರಿಗೆ ಸಹಕರಿಸುತ್ತಿದ್ದಾರೆ. ಈ ಕಾರಣದಿಂದ ಪುರಸಭೆ ಕಚೇರಿಯಲ್ಲಿ ಬಹಳಷ್ಟು ಸಿಬ್ಬಂದಿ ಪೈಕಿ ಕೇವಲ ಇಬ್ಬರು ಮಾತ್ರ ಇರುವುದು ಕಂಡುಬಂದಿತು.

ಸರ್ಕಾರದ ವಿವಿಧ ಸೇವೆಗಳಿಗೆಂದು ಪುರಸಭೆಗೆ ಬಂದಿದ್ದ ಸಾರ್ವಜನಿಕರು ಬಂದ ದಾರಿಗೆ ಸುಂಕ ಇಲ್ಲವೆಂದು ಗೊಣಗುತ್ತಿದ್ದರು. ಚೇಂಬರ್‌ನಲ್ಲಿ ಕುಳಿತಿದ್ದ ಅಧ್ಯಕ್ಷ ಮಹಾಂತೇಶ ಕಲಭಾವಿ ಅವರು ಸಿಬ್ಬಂದಿ ಇಲ್ಲ ಸೋಮವಾರ ಬನ್ನಿ ಎಂದು ಹೇಳುತ್ತಿದ್ದುದು ಕಂಡುಬಂದಿತು.


ಈ ಕುರಿತು ನಂತರ ವಿವರಿಸಿದ ಮುಖ್ಯಾಧಿಕಾರಿ ವೆಂಕಪ್ಪ ಬೀಳಗಿ, ಸಮೀಕ್ಷೆ ಕೆಲಸ ವಿಳಂಬವಾಗುತ್ತಿರುವುದರಿಂದ ಎಲ್ಲ ಸಿಬ್ಬಂದಿ ಸಮೀಕ್ಷೆ ಕೆಲಸದಲ್ಲಿರುವವರಿಗೆ ಮನೆಗಳನ್ನು ಗುರುತಿಸಲು ಸಹಾಯ ಮಾಡಲು ತೆರಳಿದ್ದಾರೆ ಎಂದು ಸ್ಪಷ್ಟಪಡಿಸಿದರು.

ಈ ಮಧ್ಯೆ ಅ.6ರಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಕೊಪ್ಪಳಕ್ಕೆ ಆಗಮಿಸುತ್ತಿದ್ದಾರೆ. ಸಮೀಕ್ಷೆ ಕೆಲಸವನ್ನು ಅಚ್ಚುಕಟ್ಟಾಗಿ ತ್ವರಿತಗತಿಯಲ್ಲಿ ನಿರ್ವಹಿಸಲು ಜಿಲ್ಲಾಡಳಿತ ಎಲ್ಲ ಸಿಬ್ಬಂದಿಯನ್ನೂ ಸಮೀಕ್ಷೆ ಕೆಲಸಕ್ಕೆ ಬಳಸಿಕೊಳ್ಳುತ್ತಿದೆ. ಇದರಿಂದ ಸಾರ್ವಜನಿಕರಿಗೆ ಸರ್ಕಾರಿ ಸೇವೆಗಳು ದೊರೆಯದಂತಾಗಿದೆ ಎಂದು ಪುರಸಭೆಯಲ್ಲಿ ಪ್ರತಿನಿಧಿಯೊಬ್ಬರು ಬೇಸರ ಹೊರಹಾಕಿದರು.

**ಪ್ರಮುಖ ಸಿಬ್ಬಂದಿ ಹುದ್ದೆ ಖಾಲಿ**

ಪುರಸಭೆಯಲ್ಲಿ ಒಟ್ಟು 23 ಸಿಬ್ಬಂದಿ ಇದ್ದಾರೆ. ಆದರೆ ಪ್ರಮುಖ ಶಾಖೆಗಳಾದ ಕಂದಾಯ ಅಧಿಕಾರಿ ಕಂದಾಯ ನಿರೀಕ್ಷಕ ವಿನ್ಯಾಸ ಶಾಖೆಗಳ ಸಿಬ್ಬಂದಿ ವರ್ಗವಾಗಿದ್ದು ಅನೇಕ ತಿಂಗಳುಗಳಿಂದಲೂ ಈ ಹುದ್ದೆಗಳು ಖಾಲಿ ಉಳಿದಿವೆ.

ಕಚೇರಿಯಲ್ಲಿನ ಸಿಬ್ಬಂದಿಗೆ ಹೆಚ್ಚುವರಿಯಾಗಿ ತಲಾ ಮೂರು ನಾಲ್ಕು ಶಾಖೆಗಳ ಪ್ರಭಾರ ಅಧಿಕಾರ ವಹಿಸಲಾಗಿದೆ. ಕಿರಿಯ ಎಂಜಿನಿಯರ್ ವಾರದಲ್ಲಿ ಎರಡು ದಿನ ಇಲ್ಲಿಗೆ ಬರಬೇಕಿದ್ದರೂ ಬರುತ್ತಿಲ್ಲ. ಖಾಲಿ ಹುದ್ದೆಗಳ ಭರ್ತಿಗೆ ಜಿಲ್ಲಾಡಳಿತಕ್ಕೆ ಪತ್ರ ಬರೆದಿದ್ದೇವೆ ಎಂದು ಅಧ್ಯಕ್ಷ ಮಹಾಂತೇಶ ಕಲಭಾವಿ ಹೇಳಿದರು.



# ನ.1ರ ನಂತರವೇ ಕಬ್ಬು ನುರಿಸುವ ಹಂಗಾಮು ಆರಂಭಿಸಿ: ಹಸಿರು ಸೇನೆ ಅಧ್ಯಕ್ಷ ಚೂನಪ್ಪ



**ಬೆಳಗಾವಿ :** 'ಸರ್ಕಾರಿ ಆದೇಶದಂತೆ ನವೆಂಬರ್ 1ರ ನಂತರವೇ, ಜಿಲ್ಲೆಯ ಎಲ್ಲ ಸಕ್ಕರೆ ಕಾರ್ಖಾನೆಗಳು ಪ್ರಸಕ್ತ ಸಾಲಿನ ಕಬ್ಬು ನುರಿಸುವ ಹಂಗಾಮು ಆರಂಭಿಸಬೇಕು' ಎಂದು ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ಅಧ್ಯಕ್ಷ ಚೂನಪ್ಪ ಪೂಜೇರಿ ಒತ್ತಾಯಿಸಿದರು.

ಇಲ್ಲಿ ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಜಿಲ್ಲೆಯಲ್ಲಿ ಯಾವುದೇ ಸಕ್ಕರೆ ಕಾರ್ಖಾನೆಗಳು ಈವರೆಗೆ ಕಬ್ಬಿಗೆ ದರ ನಿಗದಿಪಡಿಸಿಲ್ಲ. ಹಾಗಾಗಿ ಪ್ರತಿ ಟನ್ ಕಬ್ಬಿಗೆ 5,500 ದರ ನಿಗದಿಪಡಿಸಬೇಕು ಎಂದು ಒತ್ತಾಯಿಸಿ, ಅ.10ರಂದು ರಾಯಬಾಗ ತಾಲ್ಲೂಕಿನ ಹಾರೂಗೇರಿಯಲ್ಲಿ ಬೃಹತ್ ಪ್ರತಿಭಟನೆ ನಡೆಸಲಿದ್ದೇವೆ' ಎಂದರು.

ಮುಖಂಡ ಪ್ರಕಾಶ ನಾಯಕ, ಕಿಶನ್ ನಂದಿ ಇತರರಿದ್ದರು.

# ಚಿಕ್ಕಮ್ಯಾಗೇರಿ ಸರ್ಕಾರಿ ಪದವಿ ಪೂರ್ವ ಕಾಲೇಜು: ಬಳಕೆ ಮುನ್ನ ಅವನತಿಯತ್ತ ಕಟ್ಟಡ

**ಯಲಬುರ್ಗಾ :** ತಾಲ್ಲೂಕಿನ ಚಿಕ್ಕಮ್ಯಾಗೇರಿ ಗ್ರಾಮದ ಪದವಿ ಪೂರ್ವ ಕಾಲೇಜು ಕಟ್ಟಡ ಬಳಕೆಯಾಗುವ ಮುನ್ನವೇ ಅವನತಿಯತ್ತ ಸಾಗಿದೆ. ನಿರ್ಮಾಣಗೊಂಡು ಮೂರ್ನಾಲ್ಕು ವರ್ಷಗಳೇ ಕಳೆದಿವೆ. ಆದರೆ ತರಗತಿಗಳು ಮಾತ್ರ ಪಕ್ಕದ ಕಟ್ಟಡದಲ್ಲಿಯೇ ನಡೆಯುತ್ತಿವೆ. ಅಧಿಕಾರಿಗಳು ನಿರ್ಲಕ್ಷಿಸಿದ್ದರಿಂದ ಕೋಟಿ ಹಣ ಖರ್ಚು ಮಾಡಿ ನಿರ್ಮಿಸಿರುವ ಕಟ್ಟಡ ಬಳಕೆಯಾಗದೇ ಹಾಳಾಗುತ್ತಿದೆ.

ಕಲ್ಯಾಣ ಕರ್ನಾಟಕ ಅಭಿವೃದ್ಧಿ ಮಂಡಳಿ ಅನುದಾನದಲ್ಲಿ 2017–18ನೇ ಸಾಲಿನಲ್ಲಿ ಮಂಜೂರಾಗಿದ್ದ ?140 ಕೋಟಿ ವೆಚ್ಚದ ಈ ಕಾಲೇಜು ಕಟ್ಟಡವನ್ನು ಕೆಆರ್ಐಡಿಎಲ್ ನಿರ್ಮಿಸಿದೆ. ಅಪೂರ್ಣವಾಗಿದೆ ಎಂಬ ಕಾರಣಕ್ಕೆಶಿಕ್ಷಣಇಲಾಖೆಯವರುಕಟ್ಟಡವನ್ನು ತಮ್ಮ ಸುಪರ್ದಿಗೆ ಪಡೆದುಕೊಂಡಿಲ್ಲ. ಬಾಕಿ ಉಳಿದ ಕೆಲಸವನ್ನು ಪೂರ್ಣಗೊಳಿಸದೇ ನಿರ್ಲಕ್ಷಿಸುತ್ತಿರುವ ನಿಗಮದವರ ಧೋರಣೆ ವಿರುದ್ಧ ಗ್ರಾಮಸ್ಥರು ಬೇಸರ ವ್ಯಕ್ತಪಡಿಸುತ್ತಿದ್ದಾರೆ.

ಸಂಬಂಧ ಪಟ್ಟವರ ಬೇಜವಾಬ್ದಾರಿತನದಿಂದ ಕಟ್ಟಡ ಹಾಳಾಗುತ್ತಿದೆ. ಉದ್ಘಾಟನೆಗೊಳ್ಳದೇ ಮಕ್ಕಳು ಬೇರೆ ಕಟ್ಟಡದಲ್ಲಿಯೇ ಪಾಠ ಕಲಿಯುವ ಸ್ಥಿತಿ ನಿರ್ಮಾಣಗೊಂಡಿದೆ.

ಕಳೆದ 10ವರ್ಷಗಳ ಹಿಂದೆಯೇ ಗ್ರಾಮಕ್ಕೆ ಮಂಜೂರಾಗಿದ್ದ ಪದವಿ ಪೂರ್ವ ಕಾಲೇಜಿನಲ್ಲಿ ಸುಮಾರು 50ಕ್ಕೂ ಹೆಚ್ಚು ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದಾರೆ. ಕಾಲೇಜು ಕಟ್ಟಡ ಲಭ್ಯವಿಲ್ಲದ ಕಾರಣ ಪಕ್ಕದ ವಿಜ್ಞಾನ ಪ್ರಯೋಗಾಲಯದಲ್ಲಿ ತರಗತಿಗಳನ್ನು ನಡೆಸಿಕೊಂಡು ಬರಲಾಗುತ್ತಿದೆ. ಕಲಾವಿಭಾಗ ಮಾತ್ರ ಪ್ರಾರಂಭಗೊಂಡಿದ್ದು, ಪ್ರಭಾರ ಪ್ರಾಚಾರ್ಯರನ್ನು ಹೊರತು ಪಡಿಸಿದರೆ ಉಳಿದಂತೆ ಅತಿಥಿ ಉಪನ್ಯಾಸಕರೇ ಪಾಠ ಬೋಧನೆ ನಡೆಸುತ್ತಿದ್ದಾರೆ.

ಈ ಅವ್ಯವಸ್ಥೆ ಬಗ್ಗೆ ಜನಪ್ರತಿನಿಧಿಗಳ ಗಮನಕ್ಕೆ ತಂದರೂ ಯಾವುದೇ ಪ್ರಯೋಜನವಾಗಿಲ್ಲ. ಕಟ್ಟಡವನ್ನು ಬಳಸಿಕೊಳ್ಳದೇ ಇರುವುದು ಇಲಾಖೆಯ ಮತ್ತು ಸಂಬಂಧಪಟ್ಟವರ ಬೇಜವಾಬ್ದಾರಿತನಕ್ಕೆ ಸಾಕ್ಷಿಯಾಗಿದೆ' ಎಂದು ಗ್ರಾಮದ ತಿಮ್ಮಣ್ಣ ಬೋರಣ್ಣವರ, ಹನುಮೇಶ ಹಾಗೂ ಇತರರು ಬೇಸರ ವ್ಯಕ್ತಪಡಿಸಿದ್ದಾರೆ.

ನಿರ್ಮಾಣಗೊಂಡ ಕಟ್ಟಡದ ಮುಂದೆ ಮಳೆ ನೀರು ಸಂಗ್ರಹಗೊಳುತ್ತಿದ್ದು, ಸಾಕಷ್ಟು ಕಸ, ಮುಳ್ಳಿನಗಿಡಗಳು ಬೆಳೆದಿವೆ. ಕಾಲೇಜಿಗೆ ಹೋಗಲು ದಾರಿ ಇಲ್ಲದಂತಾಗಿದೆ. ಈಗಾಗಲೇ ಕಟ್ಟಡದ ಅನೇಕ ಕಡೆಗಳಲ್ಲಿ ಬಿರುಕು ಕಾಣಿಸಿಕೊಂಡಿದೆ.

ಕೊಠಡಿಯಲ್ಲಿ ಅಳವಡಿಸಿದ ಟೈಲ್ಸ್‌ಗಳು ಕಿತ್ತುಹೋಗಿವೆ. ಬಳಕೆಯ ಮುನ್ನವೇ ದುರವಸ್ಥೆಗೆ ಕಾರಣರಾದವರ ವಿರುದ್ಧ ಜಿಲ್ಲಾಮಟ್ಟದ ಅಧಿಕಾರಿಗಳು ಸೂಕ್ತ ಕ್ರಮಕೈಗೊಳ್ಳಬೇಕು.

ಕೂಡಲೇ ಬಾಕಿ ಕೆಲಸವನ್ನು ಪೂರ್ಣಗೊಳಿಸಬೇಕು.

ಅಗತ್ಯ ಸೌಲಭ್ಯ ಒದಗಿಸಿ ಮಕ್ಕಳ ಬಳಕೆಗೆ ಅನುಕೂಲ ಮಾಡಿಕೊಡಬೇಕು' ಎಂದು ಮರೆಗೌಡ ಯಂಕನಗೌಡ್ರ ಆಗ್ರಹಿಸಿದ್ದಾರೆ.



# ಪೊಳಕಿ ಮರ ಬೆಳೆಸಲು ಕ್ರಮ: ಇಟ್ನಾಳ



**ಕೊಪ್ಪಳ :** 'ಅಂತರರಾಷ್ಟ್ರೀಯ ಮಟ್ಟದಲ್ಲಿ ಖ್ಯಾತಿಯಾಗಿರುವ ವಿಜಯನಗರ ಕಾಲದ ಇತಿಹಾಸ ಹೊಂದಿರುವ ಜಿಲ್ಲೆಯ ಹೆಮ್ಮೆಯ ಕಿನ್ನಾಳ ಕಲೆ ಉತ್ತೇಜನಕ್ಕೆ ಪೊಳಕಿ ಮರಗಳು ಅಗತ್ಯವಿದ್ದು, ಇವುಗಳನ್ನು ಬೆಳೆಸಲು ಅರಣ್ಯ ಇಲಾಖೆ ಸಹಯೋಗದಲ್ಲಿ ಕ್ರಮ ಕೈಗೊಳ್ಳಲಾಗುತ್ತಿದೆ' ಎಂದು ಜಿಲ್ಲಾಧಿಕಾರಿ ಸುರೇಶ ಇಟ್ನಾಳ ಹೇಳಿದರು.

ನಗರದಲ್ಲಿ ಶುಕ್ರವಾರ ಕೇಂದ್ರದ ಜವಳಿ ಸಚಿವಾಲಯದ ವತಿಯಿಂದ ನಡೆದ ನವೋದ್ಯಮಿಗಳ ಅಭಿವೃದ್ಧಿ ಯೋಜನೆಯಡಿ ಕಿನ್ನಾಳ ಕಲೆಯ ಕಲಾವಿದರಿಗೆ ಏಳು ದಿನಗಳ ತರಬೇತಿ ಕಾರ್ಯಾಗಾರ ಉದ್ಘಾಟಿಸಿ ಮಾತನಾಡಿದ ಅವರು 'ಕಿನ್ನಾಳದ ಕಲಾಕೃತಿಗಳಿಗೆ ಸಾಕಷ್ಟು ಬೇಡಿಕೆಯಿದ್ದರೂ ಪ್ರಸ್ತುತ 67 ಕುಟುಂಬಗಳು ಮಾತ್ರ ಇದರ ಪೋಷಣೆ ಮಾಡುತ್ತಿವೆ. ಮುಂದಿನ ತಲೆಮಾರಿಗೂ ಈ ಕಲೆಯ ಕಲಾಕೃತಿ ತಯಾರಿಕೆ ಮುಂದುವರಿಸಲು ಕಾರ್ಯಾಗಾರ ನಡೆಸಲಾಗುತ್ತಿದೆ. ವ್ಯಾಪಕವಾಗಿ ಕಾಡುತ್ತಿರುವ ಪೊಳಕಿ ಮರದ ಕೊರತೆ ಕಡಿಮೆ ಮಾಡಲು ಅರಣ್ಯ ಇಲಾಖೆಗೆ ಸೂಚಿಸಲಾಗಿದೆ' ಎಂದು ತಿಳಿಸಿದರು.

ಮುಂಬರುವ ದಿನಗಳಲ್ಲಿ ಒಂದು ಸಾವಿರ ಜನರಿಗೆ ಈ ಕಲೆಯ ಕುರಿತು ತರಬೇತಿ ನೀಡಲಾಗುವುದು. ಕಲಾಕೃತಿಯನ್ನು ಮಾರಾಟ ಮಾಡಲು ಕಿನ್ನಾಳದಲ್ಲಿ ಮಾರಾಟ ಕೇಂದ್ರ ಆರಂಭಿಸಲಾಗುವುದು' ಎಂದು ಮಾಹಿತಿ ನೀಡಿದರು.

ಜಿಲ್ಲಾ ಪಂಚಾಯಿತಿ ಸಿಇಒ ವರ್ಣಿತ್ ನೇಗಿ ಮಾತನಾಡಿ 'ಸಾಮಾಜಿಕ ತಾಣಗಳನ್ನು ಪರಿಣಾಮಕಾರಿಯ ಬಳಸಿಕೊಂಡು ವಹಿವಾಟು ಹೆಚ್ಚಿಸಿಕೊಳ್ಳಬೇಕು. ನಮ್ಮ ಕಲಾಕೃತಿಗಳಿಗೆ ಹೇಗೆ ಮಾರುಕಟ್ಟೆ ಕಲ್ಪಿಸಿಕೊಳ್ಳಬೇಕು ಎನ್ನುವುದನ್ನು ತಿಳಿದುಕೊಳ್ಳಬೇಕು' ಎಂದರು.

ಸಚಿವಾಲಯದ ವ್ಯಾಪ್ತಿಯ ಕರಕುಶಲ ಸೇವಾ ಕೇಂದ್ರದ ಮಂಗಳೂರಿನ ಸಹಾಯಕ ನಿರ್ದೇಶಕಿ ರಾಜೇಶ್ವರಿ ಕೆ.ಎಂ, ಸಂಪನ್ಮೂಲ ವ್ಯಕ್ತಿ ಮಾರುತಿ, ಕರಕುಶಲ ವಸ್ತುಗಳ ಪ್ರೋತ್ಸಾಹ ಅಧಿಕಾರಿ ಸಾಯಿಕುಮಾರ ಕಲ್ಕುರಿ, ಕಿನ್ನಾಳ ಕಲೆಯ ಕಲಾವಿದ ಸಂತೋಷಕುಮಾರ ಚಿತ್ರಗಾರ ಪಾಲ್ಗೊಂಡಿದ್ದರು.

# ಜನರ ಸೇವೆಗೆ ಸದಾ ಸಿದ್ಧ: ರಮೇಶ್ ಕತ್ತಿ

**ಹುಕ್ಕೇರಿ :** 'ತಾಲ್ಲೂಕಿನ ಜನರು ಧರ್ಮಾತೀತ ಮತ್ತು ಜಾತ್ಯಾತೀತವಾಗಿ ನಮ್ಮ ಕುಟುಂಬವನ್ನು ಪ್ರೀತಿ, ವಿಶ್ವಾಸದಿಂದ ಬೆಳೆಸಿದ್ದಾರೆ. ಅವರ ಪ್ರೀತಿಗೆ ನಮ್ಮ ಕುಟುಂಬ ಋಣಬದ್ಧ. ಜನರ ಸೇವೆಗೆ ಸದಾ ಸಿದ್ಧ' ಎಂದು ಮಾಜಿ ಸಂಸದ, ಬಿಡಿಸಿಸಿ ಬ್ಯಾಂಕ್ ನಿರ್ದೇಶಕ ರಮೇಶ್ ಕತ್ತಿ ಹೇಳಿದರು.

ತಾಲ್ಲೂಕಿನಬೆಲ್ಲದಬಾಗೇವಾಡಿಯವಿಶ್ವರಾಜ ಶುಗರ್ ಕಾರ್ಖಾನೆ ಆವರಣದಲ್ಲಿ ಶನಿವಾರ ಹುಕ್ಕೇರಿ ಪಟ್ಟಣದ ಪತ್ರಕರ್ತರ ಬಳಗದಿಂದ ಸತ್ಕಾರ ಸ್ವೀಕರಿಸಿ ಮಾತನಾಡಿದರು.

ತಾಲ್ಲೂಕಿನ ಜನರ ಬೆಂಬಲದಿಂದ ನಮ್ಮ ತಂದೆ ದಿ.ವಿಶ್ವನಾಥ ಕತ್ತಿ, ಅಣ್ಣ ದಿ.ಉಮೇಶ್ ಕತ್ತಿ, ಶಾಸಕ ನಿಖಿಲ್ ಕತ್ತಿ ಹಾಗೂ ನಮ್ಮ ಮಕ್ಕಳು ಸಮಾಜದಲ್ಲಿ ಉನ್ನತ ಸ್ಥಾನಮಾನ ಹೊಂದಿದ್ದೇವೆ. ನಮ್ಮ ತಂದೆಯ ನಿಧನದ ಬಳಿಕ ಕಿರಿಯ ವಯಸ್ಸಿನಲ್ಲಿ ಸಹಕಾರ ಕ್ಷೇತ್ರದ ಮೂಲಕ ಸಮಾಜ ಸೇವೆ ಪ್ರಾರಂಭಿಸಿದ



ನಾನು ಬಿಡಿಸಿಸಿ ಬ್ಯಾಂಕಿಗೆ 28 ವರ್ಷ ಅಧ್ಯಕ್ಷನಾಗಿದ್ದು ಹಾಗೂ ಚಿಕ್ಕೋಡಿ ಲೋಕಸಭಾ ಕ್ಷೇತ್ರದ ಸಂಸದನಾಗಿ ಕಾರ್ಯನಿರ್ವಹಿಸಿದ್ದು ಇದಕ್ಕೆ ನಿದರ್ಶನ' ಎಂದರು.

ಈಚೆಗೆ ನಡೆದ ವಿದ್ಯುತ್ ಸಹಕಾರ ಸಂಘದ ಚುನಾವಣೆಯಲ್ಲಿ ನಮ್ಮ ವಿರೋಧಿಗಳು ಹಣ, ತೋಳ್ಬಲ ಮತ್ತು ಅಧಿಕಾರ ದುರುಪಯೋಗ ಮಾಡಿಕೊಂಡು ನಮ್ಮನ್ನು ಸೋಲಿಸಲು ಪ್ರಯತ್ನಿಸಿದರು. ಆದರೆ ತಾಲ್ಲೂಕಿನ ಜನ ನಮ್ಮ ಕೈ ಬಿಡಲಿಲ್ಲ. ಈ ಗೆಲುವು ನಮಗೆ ನೂರಾನೆ ಬಲ ತಂದುಕೊಟ್ಟಿದೆ. ಮುಂಬರುವ ದಿನಗಳಲ್ಲಿ ಜಿಲ್ಲೆಯ ಜತೆಗೆ ರಾಜ್ಯಾದ್ಯಂತ ಸಂಚರಿಸಿ ಜನರಲ್ಲಿ ಸ್ವಾಭಿಮಾನದ ಛಲ ಹೆಚ್ಚಿಸುವುದೇ ನನ್ನ ಗುರಿ' ಎಂದರು.

ನೂತನ ನಿರ್ದೇಶಕ, ಉದ್ಯಮಿ ಪೃಥ್ವಿ ಕತ್ತಿ ಅವರನ್ನು ಪತ್ರಕರ್ತರ ಬಳಗದ ವತಿಯಿಂದ ಸತ್ಕರಿಸಲಾಯಿತು. ಇದೇ ಸಂದರ್ಭದಲ್ಲಿ ತಾಲ್ಲೂಕಿನ ನೂರಾರು ಜನ ಮತ್ತು ಜನಪ್ರತಿನಿಧಿಗಳು ಆಗಮಿಸಿ ರಮೇಶ ಕತ್ತಿ ಅವರನ್ನು ಅಭಿನಂದಿಸಿದರು.

ವಿದ್ಯುತ್ ಸಹಕಾರ ಸಂಘದ ನಿರ್ದೇಶಕ ಪೃಥ್ವಿ ಕತ್ತಿ, ಅಜಿತ ಮುನ್ನೋಳಿ, ಎಂ.ಡಿ. ರವೀಂದ್ರ ಪಾಟೀಲ್, ರೆಸಿಡೆಂಟ್ ಎಂಜನಿಯರ್ ನೇಮಿನಾಥ ಖೇಮಲಾಪೂರೆ, ವ್ಯವಸ್ಥಾಪಕ ದುರದುಂಡಿ ನಾಯಿಕ, ಬಸವರಾಜ ವಾಜಂತ್ರಿ, ಸೆಕ್ಷನ್ ಆಫಿಸರ್ ಉದಯ ಮಗದುಮ್ಮ ಮುಖಂಡರಾದ ರಾಯಪ್ಪ ಡೂಗ, ರವೀಂದ್ರ ಕಲ್ಲಟ್ಟಿ, ಬಸವರಾಜ ನಾಗಣ್ಣವರ, ಪತ್ರಕರ್ತರಾದ ಪಿ.ಜಿ.ಕೊಣ್ಣೂರ, ಬಾಬು ಸುಂಕದ, ಸಂಜೀವ ಮುತಾಲಿಕ, ಬಸವರಾಜ ಕೊಂಡಿ, ಡಾ. ಸೋಹನ್ ವಾಗೋಜಿ ಇದ್ದರು.

# ಬೆಳೆಹಾನಿಗೆ ಶೀಘ್ರವೇ ಪರಿಹಾರ: ಸಿದ್ದರಾಮಯ್ಯ



**ಬೆಳಗಾವಿ:** 'ಉತ್ತರ ಕರ್ನಾಟಕದ ಒಂಬತ್ತು ಜಿಲ್ಲೆಗಳಲ್ಲಿ ಈ ವರ್ಷ ಶೇ 95ರಷ್ಟು ಹೆಚ್ಚು ಮಳೆಯಾಗಿದೆ. ಜಿಲ್ಲೆಯೊಂದರಲ್ಲಿ 80 ಸಾವಿರ ಹೆಕ್ಟೇರ್ ಪ್ರದೇಶದಲ್ಲಿ ಬೆಳೆಹಾನಿಯಾಗಿದೆ.

ಸಮೀಕ್ಷೆ ನಡೆಸಲಾಗುತ್ತಿದ್ದು, ರೈತರಿಗೆ ಶೀಘ್ರ ಪರಿಹಾರ ನೀಡಲಾಗುವುದು' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಇಲ್ಲಿನ ಜಿಲ್ಲಾಸ್ಪತ್ರೆ ಆವರಣದಲ್ಲಿ 120 ಕೋಟಿ ವೆಚ್ಚದಲ್ಲಿ ನಿರ್ಮಿಸಿದ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ಲೋಕಾರ್ಪಣೆ, ಗೃಹವೈದ್ಯರ ವಸತಿ ನಿಲಯದ ಶಂಕುಸ್ಥಾಪನೆ, ಸ್ಮಾರ್ಟ್‌ಸಿಟಿ ಅಡಿ ನಿರ್ಮಿಸಿದ ಬಸ್ ನಿಲ್ದಾಣ ಉದ್ಘಾಟನೆ ಹಾಗೂ ರಾಣಿ ಚನ್ನಮ್ಮ ವಿಶ್ವವಿದ್ಯಾನಿಲಯದ ಪಿಎಂ ಉಷಾ (ಮೇರು) ಕಟ್ಟಡ ಕಾಮಗಾರಿಗಳು ಮತ್ತು ವಿ.ವಿ ರಸ್ತೆ ನಿರ್ಮಾಣ ಕಾಮಗಾರಿಗೆ ಶನಿವಾರ ಚಾಲನೆ ನೀಡಿ ಮಾತನಾಡಿದರು.

ಬೆಳೆಹಾನಿಯಾಗಿದ್ದರೆ ಖುಷ್ಕಿ ಜಮೀನಿಗೆ ಹೆಕ್ಟೇರ್‌ಗೆ 17 ಸಾವಿರ, ನೀರಾವರಿಗೆ 21.5 ಸಾವಿರ, ಬಹುಬೆಳೆಗೆ 31 ಸಾವಿರ ಪರಿಹಾರ ನೀಡಲಾಗುವುದು.

ಇದರಲ್ಲಿ ಎನ್‌ಡಿಆರ್‌ಎಫ್ ಅರ್ಧ ಹಾಗೂ ರಾಜ್ಯ ಸರ್ಕಾರ ಅರ್ಧ ಹಣ ನೀಡಲಿದೆ' ಎಂದರು.

ನನೆಗುದಿಗೆ ಬಿದ್ದಿದ್ದ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯನ್ನು ಆರಂಭಿಸಲಾಗಿದೆ.

ಬಡವರಿಗೂ ಉಚಿತವಾಗಿ ಅತ್ಯಾಧುನಿಕ ವೈದ್ಯಕೀಯ ಸೇವೆ ನೀಡುವುದು ನಮ್ಮ ಉದ್ದೇಶ' ಎಂದರು.

ವೈದ್ಯಕೀಯ ಶಿಕ್ಷಣ ಸಚಿವ ಡಾ.ಶರಣಪ್ರಕಾಶ ಪಾಟೀಲ, ಜಿಲ್ಲಾ ಉಸ್ತುವಾರಿ ಸಚಿವ ಸತೀಶ ಜಾರಕಿಹೊಳಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಲಕ್ಷ್ಮೀ ಹೆಬ್ಬಾಳಕರ, ಸಾರಿಗೆ ಸಚಿವ ರಾಮಲಿಂಗಾ ರೆಡ್ಡಿ, ಶಾಸಕ ಆಸಿಫ್ ಸೇಠ್ ಮಾತಾಡಿದರು.

ಕೆಎಲ್‌ಇ ಸಂಸ್ಥೆಯ ಕಾರ್ಯಾಧ್ಯಕ್ಷ ಪ್ರಭಾಕರ್ ಕೋರೆ, ವಿಧಾನಸಭೆ ಮುಖ್ಯ ಸಚೇತಕ ಅಶೋಕ ಪಟ್ಟಣ, ರಾಜ್ಯ ಹಣಕಾಸು ಸಂಸ್ಥೆಯ ಅಧ್ಯಕ್ಷ ಮಹಾಂತೇಶ ಕೌಜಲಗಿ, ವಾಯವ್ಯ ಸಾರಿಗೆ ಸಂಸ್ಥೆಯ ಅಧ್ಯಕ್ಷ ಭರಮಗೌಡ ಕಾಗೆ, ಶಾಸಕ ಬಾಬಾಸಾಹೇಬ ಪಾಟೀಲ, ವಿಧಾನ ಪರಿಷತ್ ಸದಸ್ಯರಾದ ನಾಗರಾಜ ಯಾದವ, ಚನ್ನರಾಜ ಹಟ್ಟಿಹೊಳಿ, ಬುಡಾ ಅಧ್ಯಕ್ಷ ಲಕ್ಷ್ಮಣರಾವ್ ಚಿಂಗಳೆ ಹಾಗೂ ಅಧಿಕಾರಿಗಳು ವೇದಿಕೆ ಇದ್ದರು.

# ಕಟ್ಟೀಮನಿ ಜನರ ಸಾಹಿತಿಯಾಗಿದ್ದರು: ಯಲ್ಲಪ್ಪ ಹಿಮ್ಮಡಿ

**ಬೆಳಗಾವಿ :** 'ಪ್ರಗತಿಶೀಲ ಸಾಹಿತ್ಯ ಚಳವಳಿಯ ಪ್ರತಿಪಾದಕರಲ್ಲಿ ಅಗ್ರಸ್ಥಾನದಲ್ಲಿದ್ದ ಬಸವರಾಜ ಕಟ್ಟೀಮನಿ ಅವರು, ದುಡಿಯುವ ಜನರ ಪರವಾಗಿ ಕತೆ, ಕಾದಂಬರಿಗಳನ್ನು ರಚಿಸಿ ಜನರ ಸಾಹಿತಿ ಎಂದು ಖ್ಯಾತಿ ಗಳಿಸಿದ್ದರು' ಎಂದು ಬಸವರಾಜ ಕಟ್ಟೀಮನಿ ಪ್ರತಿಷ್ಠಾನದ ಅಧ್ಯಕ್ಷ ಯಲ್ಲಪ್ಪ ಹಿಮ್ಮಡಿ ಹೇಳಿದರು.

ಇಲ್ಲಿನ ಕೆಎಲ್‌ಇ ಸಂಸ್ಥೆಯ ಲಿಂಗರಾಜ ಮಹಾವಿದ್ಯಾಲಯದಲ್ಲಿ ಕನ್ನಡ ವಿಭಾಗ ಹಾಗೂ ಬಸವರಾಜ ಕಟ್ಟೀಮನಿ ಪ್ರತಿಷ್ಠಾನದ ವತಿಯಿಂದ ಶುಕ್ರವಾರ ಹಮ್ಮಿಕೊಂಡಿದ್ದ 'ಬಸವರಾಜ ಕಟ್ಟೀಮನಿ ಅವರ ಸಾಹಿತ್ಯದಲ್ಲಿ ಪ್ರಗತಿಶೀಲತೆ' ಕುರಿತ ವಿಚಾರಸಂಕಿರಣ ಉದ್ಘಾಟಿಸಿ ಮಾತನಾಡಿದರು.

ಅಧ್ಯಕ್ಷತೆವಹಿಸಿದ್ದ ಪ್ರಾಚಾರ್ಯ ಎಚ್.ಎಸ್.



ಮೇಲಿನಮನಿ, 'ಬೀದಿಗೆ ಬಂದವರು, ಗಿರಣಿ ಕಾರ್ಮಿಕರು, ಕೂಲಿಕಾರರು, ಮಹಿಳೆಯರು ಮತ್ತು ಪರಿಶಿಷ್ಟರ ಪರವಾಗಿ ಅತಿಹೆಚ್ಚು ಕತೆ, ಕಾದಂಬರಿ ಬರೆದವರಲ್ಲಿ ಬಸವರಾಜ ಕಟ್ಟೀಮನಿ ಮೊದಲಿಗರಾಗಿದ್ದರು. ಬರೆದಂತೆ ಬದುಕಿದ ಬದ್ಧತೆಯ ಸಾಹಿತಿ ಅವರಾಗಿದ್ದರು' ಎಂದು ಸ್ಮರಿಸಿದರು.

ಪ್ರಾಧ್ಯಾಪಕಿ ಸರಸ್ವತಿ ಭಗವತಿ ಅವರು ಪ್ರಬಂಧ ಮಂಡಿಸಿದರು.

ಸೋಮನಾಥ ಚಿಕ್ಕನರಗುಂದ, ಪಿ.ಜಿ.ಕೆಂಪಣ್ಣವರ, ಆಶಾಯಮಕನಮರಡಿ, ಮಹೇಶ ಗುರನಗೌಡರ, ಶಶಿಕಾಂತ ತಾರದಾಳೆ, ಅಡಿವೆಪ್ಪ ಇಟಗಿ, ಸಂತೋಷ ಚವ್ಹಾಣ, ರೋಹಿಣಿ ಹಣಬರಟ್ಟಿ, ಸ್ವಾತಿ ಮಾಳಿಗೆ, ವರ್ಷಾ ಮುರಗೋಡ, ಜಾನ್ವಿ ಬೆಳ್ಳೆ, ಸೃಷ್ಟಿ ಕೊರೆನ್ನವರ ಇದ್ದರು. ಪ್ರತಿಷ್ಠಾನದ ಸದಸ್ಯೆ ಕೆ.ಆರ್.ಸಿದ್ದಗಂಗಮ್ಮ ಆಶಯ ನುಡಿಗಳನ್ನಾಡಿದರು. ಎಚ್.ಎಂ.ಚನ್ನಪ್ಪಗೋಳ ಸ್ವಾಗತಿಸಿದರು. ಪಾಂಡುರಂಗ ಗಾಣಿಗೇರ ವಂದಿಸಿದರು. ನಾಗವೇಣಿ ದೂದ್ಯಾಗೋಳ ಮತ್ತು ತ್ರಿವೇಣಿ ಪೂಜೇರ ನಿರೂಪಿಸಿದರು.

# ಸುರಭಿ ವೃದ್ಧಾಶ್ರಮದಲ್ಲಿ ಹಿರಿಯ ನಾಗರಿಕರ ದಿನಾಚರಣೆ

**ಕೊಪ್ಪಳ :** ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಜಿಲ್ಲಾ ಭೋದಕ ಆಸ್ಪತ್ರೆ ಕಿಮ್ಸ್, ಜಿಲ್ಲಾ ಆಯುಷ ಕ್ಲಿನಿಕ್ ಹಾಗೂ ಎನ್.ಸಿ.ಡಿ. ಕ್ಲಿನಿಕ್ ಕೊಪ್ಪಳ,



ಇವರ ಸಂಯುಕ್ತಾಶ್ರಯದಲ್ಲಿ ಅ.4 ರಂದು ಶ್ರೀ ಸುರಭಿ ವೃದ್ಧಾಶ್ರಮದಲ್ಲಿ ವಿಶ್ವ ಹಿರಿಯ ನಾಗರಿಕರ ದಿನಾಚರಣೆಯನ್ನು ಅಂಗವಾಗಿ ಸ್ಥಳೀಯ ಮತ್ತು ಜಾಗತಿಕ ಕ್ರಿಯೆಗೆ ಚಾಲನೆ ನೀಡುವ ಹಿರಿಯ ವ್ಯಕ್ತಿಗಳು: ನಮ್ಮ ಅಕಾಂಕ್ಷೆಗಳು, ನಮ್ಮ ಯೋಗಕ್ಷೇಮ, ನಮ್ಮ ಹಕ್ಕುಗಳು ಎಂಬ ಘೋಷವಾಕ್ಯದೊಂದಿಗೆ ಅರಿವು ಮೂಡಿಸುವ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು.

ಕಾರ್ಯಕ್ರಮದಲ್ಲಿ ಜಿಲ್ಲಾ ಬೋಧಕ ಆಸ್ಪತ್ರೆ ಕಿಮ್ಸ್‌ನ ಜನರಲ್ ಮೆಡಿಸಿನ್ ವಿಭಾಗದ ಡಾ. ಸ್ವರಾಜಗೌಡ, ಆಯುಷ್ ವೈದ್ಯಾಧಿಕಾರಿ ಡಾ.ಸರ್ವಮಂಗಳ, ಜಿಲ್ಲಾ ಎನ್.ಸಿ.ಡಿ. ಸಂಯೋಜಕಿ ಡಾ.ಜಯಶ್ರೀ ಎಂ.ಎಚ್., ಜಿಲ್ಲಾ ಆರೋಗ್ಯ ಶಿಕ್ಷಣ ಅಧಿಕಾರಿ ಶಿವಾನಂದ ವ್ಹಿ.ಪಿ ಅವರು ವೃದ್ಧರ ಆರೋಗ್ಯ, ವೈಯಕ್ತಿಕ ಸ್ವಚ್ಛತೆ ಮುಂತಾದ ವಿಷಯಗಳ ಕುರಿತು ಜಾಗೃತಿ ಮೂಡಿಸಿದರು.

ಜಿಲ್ಲಾ ಆಸ್ಪತ್ರೆಯ ಎನ್.ಸಿ.ಡಿ ಕ್ಲಿನಿಕ್‌ನ ಆಪ್ತಸಮಾಲೋಚಕರಾದ ಶಿವಪುತ್ರಪ್ಪ, ಫಿಜಿಯೋಥೆರಪಿಸ್ಟ್ ಖಾಜಾ ಹುಸೇನ್, ತಂತ್ರಜ್ಞರಾದ ರೇಖಾ ಗುಬ್ಬಿ, ಶುಶ್ರೂಷಕ ಅಧಿಕಾರಿ ಮಲ್ಲೇಶಪ್ಪ, ಮಲ್ಟಿಸ್ಕಿಲ್ ವರ್ಕರ್ ವೀರೇಶ ಸೇರಿದಂತೆ ವೃದ್ಧಾಶ್ರಮದ ಸಿಬ್ಬಂದಿ, ಸೇರಿದಂತೆ ಇತರರು ಉಪಸ್ಥಿತರಿದ್ದರು. ಕಾರ್ಯಕ್ರಮದಲ್ಲಿ ಉಚಿತ ಆರೋಗ್ಯ ತಪಾಸಣೆ ಶಿಬಿರ ಮತ್ತು ಫಿಜಿಯೋಥೆರಪಿ ಕಾರ್ಯಾಗಾರವನ್ನು ಹಮ್ಮಿಕೊಂಡು ಹಿರಿಯ ನಾಗ-ರಿಕರಿಗೆ ಚಿಕಿತ್ಸೆ ನೀಡಲಾಯಿತು.

# ಗದಗ ರೈಲ್ವೇ: ಅಪರಿಚಿತ ಪುರುಷನ ಶವದ ವಾರಸುದಾರರ ಪತ್ತೆಗೆ ಮನವಿ

**ಕೊಪ್ಪಳ :** ಗದಗ ರೈಲ್ವೇ ನಿಲ್ದಾಣದಲ್ಲಿ ಅಕ್ಟೋಬರ್ 2 ರಂದು 25 ರಿಂದ 30 ವರ್ಷದ ಅಪರಿಚಿತ ಪುರುಷನು ಯಾವುದೋ ರೈಲು ಗಾಡಿಯಿಂದ ಆಕಸ್ಮಿಕವಾಗಿ ಬಿದ್ದು ಮೃತಪಟ್ಟಿದ್ದು, ಈ ಬಗ್ಗೆ ಗದಗ ರೈಲ್ವೇ ಪೋಲೀಸ್ ಠಾಣೆಯಲ್ಲಿ ಯುಡಿಆರ್ ನಂ: 39/2025 ಕಲಂ 194 ಬಿ.ಎನ್.ಎಸ್.ಎಸ್ ನೇದ್ದರ ರೀತ್ಯ ಪ್ರಕರಣ ದಾಖಲಾಗಿದೆ.

ಮೃತ ವ್ಯಕ್ತಿಯ ಚಹರೆ: ಮೃತ ವ್ಯಕ್ತಿಯು ಅಗಲವಾದ ಮುಖ, ಅಗಲವಾದ ಮೂಗು, ಸಾದಗಪ್ಪು ಮೈಬಣ್ಣ, ಸಾಧಾರಣ ಮೈಕಟ್ಟು, ಸುಮಾರು 5.3 ಅಡಿ ಎತ್ತರ, ತಲೆಯಲ್ಲಿ ಸುಮಾರು 2-3 ಇಂಚು ಕಪ್ಪು ಮಿಶ್ರಿತ ಬಿಳಿ ಕೂದಲು, ½ ಇಂಚಿನಷ್ಟು ಕಪ್ಪು ದಾಡಿ-ಮೀಸೆ ಹೊಂದಿದ್ದಾರೆ. ಮೃತನ ಮೈಮೇಲೆ ಒಂದು ಬೂದಿ ಬಣ್ಣದ ಹೂವಿನ ಡಿಸೈನ್ ಇರುವ ಫುಲ್ ಶರ್ಟ್, ಒಂದು ಕಪ್ಪು ಕಲರಿನ ಟೀ ಶರ್ಟ್, ಒಂದು ಕಪ್ಪು ಕಲರಿನ ಪ್ಯಾಂಟ್ ಧರಿಸುತ್ತಾರೆ.

ಈ ಮೃತ ವ್ಯಕ್ತಿ ಚಹರೆ ಪಟ್ಟಿಗೆ ಹೋಲಿಕೆಯಾಗುವಂತಹ ವ್ಯಕ್ತಿ ಕಾಣೆಯಾಗಿದ್ದಲ್ಲಿ, ಸಂಬಂಧಿಕರು ಹಾಗೂ ವಾರಸುದಾರರು ಕೂಡಲೇ ಹತ್ತಿರದ ಪೊಲೀಸ್ ಠಾಣೆಗೆ ಅಥವಾ ಗದಗ ರೈಲ್ವೇ ಪೊಲೀಸ್ ಠಾಣೆ ದೂ.ಸಂ: 08372-278744, ಮೊ.ಸಂ: 9480802128, ಇ-ಮೇಲ್: ರಚಿಜಚಿರಡಿಟಥಿ@ಇರಿ.ರಿಅತ.ಟಿ ಅಥವಾ ರೈಲ್ವೇ ಪೊಲೀಸ್ ಕಂಟ್ರೋಲ್ ರೂಂ: 080-22871291 ಗೆ ಸಂಪರ್ಕಿಸಿ ಮಾಹಿತಿ ನೀಡುವಂತೆ ಗದಗ ರೈಲ್ವೇ ಪೊಲೀಸ್ ಠಾಣೆಯ ಅಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ನಿಡಗುಂದಿಯಲ್ಲಿ ಗಮನಸೆಳೆದ ಭರತನಾಟ್ಯ

**ವಿಜಯಪುರ :** ಜಿಲ್ಲೆಯ ನಿಡಗುಂದಿ ಪಟ್ಟಣದ ವೀರೇಶ ನಗರದಲ್ಲಿ ದಸರಾ ಅಂಗವಾಗಿ ನವರಾತ್ರಿ ಉತ್ಸವದಲ್ಲಿ ಸ್ಥಳೀಯ ನಾಟ್ಯಮಯೂರಿ ಭರತನಾಟ್ಯ ಡಾನ್ಸ್ ಕ್ಲಾಸಿನ ಗುರುಮಾತೆ ಆರತಿ ಹೊಸಮನಿ ಮತ್ತು ಅವರ ವಿದ್ಯಾರ್ಥಿಗಳ ತಂಡದಿಂದ ಸತತ 11 ದಿನಗಳ ಕಾಲ ನಡೆದ ಭರತನಾಟ್ಯ, ಶಿವ ತಾಂಡವ ನೃತ್ಯ, ಭಕ್ತ ಪ್ರಹ್ಲಾದನ ಕಥೆ, ಕವಿರತ್ನ ಕಾಳಿದಾಸ , ಶ್ರೀದೇವಿ ನೃತ್ಯ ಸೇರಿದಂತೆ ವಿವಿಧ ನೃತ್ಯ ಪ್ರದರ್ಶನ ಜನತೆಯ ಗಮನ ಸೆಳೆಯಿತು.

ಆರತಿ ಹೊಸಮನಿಯವರು ಅನೇಕ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಭಾಗವಹಿಸಿ ಭರತನಾಟ್ಯ ವಿಭಾಗದಲ್ಲಿ ಅನೇಕ ಪ್ರಶಸ್ತಿಗಳನ್ನು ತಮ್ಮದಾಗಿಸಿಕೊಂಡಿದ್ದಾರೆ,

ಹತ್ತು ವರ್ಷಗಳಿಂದ ಭರತನಾಟ್ಯವನ್ನು ಕಲೆ ಬೆಳೆಸಲು ನಿಡಗುಂದಿಯಲ್ಲಿ ನೂರಾರು ಮಕ್ಕಳಿಗೆ ತರಬೇತಿ ನೀಡಿ ಪ್ರದರ್ಶಿಸಿದ್ದಾರೆ.

ಈ ಕುರಿತು ಮಾತನಾಡಿದ ನಾಟ್ಯಮಯೂರಿ ಸಂಸ್ಥೆಯ ಅಧ್ಯಕ್ಷೆ ಆರತಿ ಹೊಸಮನಿ ಅವರು, ಭರತ



ನಾಟ್ಯ ಎನ್ನುವುದು ಕೆಲ ಪ್ರದೇಶ ಮತ್ತು ಕೆಲವರಿಗೆ ಮಾತ್ರ ಮೀಸಲು ಎನ್ನುವಂತಾಗಿದೆ. ಆದ್ದರಿಂದ ದೇಶದ ಪ್ರಾಚೀನ ಕಲೆಯೊಳಗೊಂದಾಗಿರುವ ಭರತನಾಟ್ಯವನ್ನು ಗ್ರಾಮೀಣ ಭಾಗದಲ್ಲಿನ ಮಕ್ಕಳು ಕಲಿಯಬೇಕು.

ಇದರಿಂದ ಕಲೆ ಬೆಳೆಯುವದರೊಂದಿಗೆ ಮಕ್ಕಳ ಆರೋಗ್ಯಕ್ಕೂ ಸಹಕಾರಿ ಆಗಲಿದೆ.

ಸಮಾಜದ ಸ್ವಾಸ್ಥ್ಯ ಸುಧಾರಿಸಲು ಸಹಕಾರಿ ಆಗಲಿದೆ ಎಂದು ಹೇಳಿದರು.

# ದೇಶಕ್ಕೆ ರೈತ ಬೆಳೆಗೆ ಯೋಗ್ಯ ದರ ಕೊಡುವ ಪ್ರಧಾನಿ ಬೇಕಿದೆ: ಸಚಿವ ಶಿವಾನಂದ ಪಾಟೀಲ

**ಕೊಲ್ಹಾರ:** ದೇಶದಲ್ಲಿ ರೈತರು ಪರಿಶ್ರಮದಿಂದ ಬೆಳೆದ ಬೆಳೆಗೆ ಯೋಗ್ಯ ದರ ನೀಡುವ ಶಕ್ತಿ ಇರುವ ಪ್ರಧಾನಿ ನಮ್ಮ ದೇಶಕ್ಕೆ ಸಿಕ್ಕಿಲ್ಲ ಎಂಬುದು ನಮ್ಮ ದುರ್ದೈವ. ಒಂದೊಮ್ಮೆ ರೈತರಬೆಳೆಗೆವೈಜ್ಞಾನಿಕಬೆಲೆನೀಡಿದರೆಸಾಕು ನಾವು ಇನ್ನಾವುದೇ ಸೌಲಭ್ಯ ನೀಡದಿದ್ದರೂ ನಮ್ಮ ರೈತರಿಗೆ ದೇಶಕ್ಕೆ ಸಾಲ ಕೊಡುವ ಶಕ್ತಿ ಬರಲಿದೆ ಎಂದು ಜವಳಿ, ಕಬ್ಬು ಅಭಿವೃದ್ಧಿ, ಸಕ್ಕರೆ, ಕೃಷಿ ಮಾರುಕಟ್ಟೆ ಸಚಿವರಾದ ಶಿವಾನಂದ ಪಾಟೀಲ ಹೇಳಿದರು.

ಶನಿವಾರಕೊಲ್ಹಾರತಾಲೂಕಿನಮುತ್ತಲದಿನ್ನಿ ಗ್ರಾಮದಲ್ಲಿ ನೂತನವಾಗಿ ಅಸ್ತಿತ್ವಕ್ಕೆ ಬಂದಿರುವ ಹಾಲು ಉತ್ಪಾದಕರ ಸಹಕಾರಿ ಸಂಘಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಅನ್ಯ ರಾಜ್ಯಗಳಿಗೆ ಹೋಲಿಸಿದರೆ ಕರ್ನಾಟಕ ರಾಜ್ಯದಲ್ಲಿ ಯಾವುದೇ ಸರ್ಕಾರ ಅಧಿಕಾರಕ್ಕೆ ಬಂದರೂ ರೈತರಿಗೆ ಹೆಚ್ಚಿನ ಸೌಲಭ್ಯ ನೀಡುತ್ತಿದೆ ಎಂದರು.

ರೈತರು ಪರಿಶ್ರಮದಿಂದ ಆಹಾರ ಧಾನ್ಯ ಉತ್ಪಾದಿಸುತ್ತಾರೆ ಎಂಬ ಕಾರಣಕ್ಕೆ ದೇಶದ ಜನರು ಎರಡು ಹೊತ್ತು ಊಟ ಮಾಡುವ ಸಂತೃಪ್ತ ಸ್ಥಿತಿ ಇದೆ. ರೈತ ಆಹಾರ ಧಾನ್ಯ ಉತ್ಪಾದಿಸದಿದ್ದರೆ ಪರಿಸ್ಥಿತಿ ಗಂಭೀರವಾಗಲಿದೆ ಎಂದರು.




ಭಾರತವನ್ನು ನಾಲ್ಕು ಶತಮಾನ ಆಳಿದ ಬ್ರಿಟಿಷರು ಅನ್ನಕ್ಕಾಗಿ ಪರಿತಪಿಸುವ ದುಸ್ಥಿತಿ ಎದುರಾಗಿದೆ. ಇಂಗ್ಲೆಂಡ್ ದೇಶದಲ್ಲಿ ರೈತರು ಕೃಷಿಯಿಂದ ಸಂಪೂರ್ಣ ವಿಮುಖರಾಗಿದ್ದು, ಅಲ್ಲೀಗ ಶೇ.1-2 ರಷ್ಟು ರೈತರು ಮಾತ್ರ ಒಕ್ಕಲುತನ ಮಾಡುತ್ತಿದ್ದಾರೆ. ಭಾರತದಲ್ಲಿ ಶೇ.65 ಕ್ಕಿಂತ ಹೆಚ್ಚಿನ ರೈತರು ಕೃಷಿಯಲ್ಲಿ ತೊಡಗಿರುವುದು ನಮ್ಮ ಸುದೈವ ಎಂದರು.

ಹಾಲು ಉತ್ಪಾದಕರ ಸಂಘ ಸ್ಥಾಪಿಸಿದರೆ ಸಾಲದು ಸಂಘ ಸಶಕ್ತವಾಗಿ ಬೆಳೆಯುವಲ್ಲಿ ನಿಮ್ಮೂರಲ್ಲಿ ಹಾಲು ಉತ್ಪಾದನೆ ಹೆಚ್ಚಬೇಕು. ಇದಕ್ಕಾಗಿ ಪುರುಷರು ಹೈನೋದ್ಯಮದಲ್ಲಿ ತೊಡಗಬೇಕು. ನಿಮ್ಮಿಂದ ಆಗದಿದ್ದರೆ ಮನೆಯಲ್ಲಿ ಮಹಿಳೆಯರಿಗೆ 2 ಎಮ್ಮೆ ಅಥವಾ ಆಕಳು ಕೊಡಿಸಿದರೆ ನಿಮ್ಮ ಕೌಟುಂಬಿಕ ಆರ್ಥಿಕ ಅಭಿವೃದ್ಧಿಗೆ ಸಹಕಾರಿ ಆಗಲಿದೆ. ಜೊತೆಗೆ ಹಾಲು ಉತ್ಪಾದಕರ ಸಂಘ ಸ್ಥಾಪನೆಯ ಉದ್ದೇಶ ಈಡೇರಲಿದೆ ಎಂದು ಸಲಹೆ ನೀಡಿದರು.

ಹಿಂದೆಲ್ಲ ನಮ್ಮ ಭಾಗದಲ್ಲಿರುವ ಬೆಲ್ಲ ಉತ್ಪಾದನೆಗಾಗಿ ಕಬ್ಬು ಬೆಳೆಯಲಾಗುತ್ತಿತ್ತು. ಮಂಡ್ಯ ಜಿಲ್ಲೆ ಸಕ್ಕರೆ ನಾಡು ಎನಿಸಿಕೊಂಡಿತ್ತು. ಆದರೆ ಮಂಡ್ಯ ಜಿಲ್ಲೆಯಲ್ಲಿ ಉತ್ಪಾದಿಸುವಷ್ಟು ಸಕ್ಕರೆಯನ್ನು ಇದೀಗ ನಿರಾಣಿ ಸಕ್ಕರೆ ಕಾರ್ಖಾನೆ ಒಂದರಲ್ಲೇ ಉತ್ಪಾದಿಸಲಾಗುತ್ತದೆ. ವಿಜಯಪುರ, ಬಾಗಲಕೋಟೆ ಅವಳಿ ಜಿಲ್ಲೆಯಲ್ಲಿ 24 ಸಕ್ಕರೆ ಕಾರ್ಖಾನೆಗಳಿದ್ದು, ವಿಜಯಪುರ ಜಿಲ್ಲೆಯಲ್ಲಿ ಉತ್ಪಾದಿಸುವ ಸಕ್ಕರೆಯನ್ನು ಇಡೀ ಕರ್ನಾಟಕ ರಾಜ್ಯಕ್ಕೆ ಪೂರೈಸಬಹುದು. ವಿಜಯಪುರ, ಬಾಗಲಕೋಟೆ ಎರಡೂ ಜಿಲ್ಲೆಗಳಲ್ಲಿ ಉತ್ಪಾದಿಸುವ ಸಕ್ಕರೆಯನ್ನು ಇಡೀ ದೇಶಕ್ಕೆ ಪೂರೈಕೆ ಮಾಡಬಹುದು ಎಂದರು.

ಅಮಲಝರಿಯ ಜ್ಞಾನಮಯ ಶ್ರೀಗಳು, ಮಂಜುನಾಥ ಪೂಜಾರಿ ಸಾನ್ನಿಧ್ಯ ವಹಿಸಿದ್ದರು. ಮುತ್ತಲದಿನ್ನಿ ಹಾಲು ಉತ್ಪಾದಕರ ಸಹಕಾರಿ ಸಂಘದ ಅಧ್ಯಕ್ಷರಾದ ಎಸ್.ಎಂ.ಬಿರಾದಾರ ಅಧ್ಯಕ್ಷತೆವಹಿಸಿದ್ದರು. ವಿಜಯಪುರ ಬಾಗಲಕೋಟೆ ಹಾಲು ಉತ್ಪಾದಕರ ಸಹಕಾರಿ ಸಂಘಗಳ ಒಕ್ಕೂಟದ ಅಧ್ಯಕ್ಷ ಈರಣಗೌಡ ಕರಿಗೌಡರ, ಮುತ್ತಲದಿನ್ನಿ ಹಾಲು ಉತ್ಪಾದಕರ ಸಹಕಾರಿ ಸಂಘದ ನಿಂಗನಗೌಡ ಪಾಟೀಲ, ಬಾಬು ಪಾತ್ರೋಟ, ಡಿ.ಟಿ. ಶಿವಶಂಕರಸ್ವಾಮಿ, ಚಂದ್ರಮ್ಮ ಮುಳೇದ, ವಿಸ್ತರಣಾಧಿಕಾರಿ ಪ್ರಸನ್ನ ಬಿರಾದಾರ, ವ್ಯವಸ್ಥಾಪಕ ಡಾ.ಗಜರಾಜ ರಣತೂರ, ಶಿವಕುಮಾರ ಚವ್ಹಾಣ ಸೇರಿದಂತೆ ಇತರರು ವೇದಿಕೆ ಮೇಲೆ ಉಪಸ್ಥಿತರಿದ್ದರು

# ಉದ್ಯೋಗಕ್ಕೆ ನಿತ್ಯ ವಲಸೆ

**ಕಾರವಾರ :** 'ವಿಜಯಪುರ ಅಥವಾ ಕಲಬುರಗಿಯಲ್ಲಿ ದೊಡ್ಡ ಕಾರ್ಖಾನೆಗಳು ಇದ್ದಿದ್ದರೆ, ನಾನು ಬೆಂಗಳೂರಿಗೆ ಬಂದು ಎಲೆಕ್ಟ್ರಿಷಿಯನ್ ಆಗುವ ಪ್ರಮೇಯವೇ ಇರುತ್ತಿರಲಿಲ್ಲ. ನನ್ನ ಗೆಳೆಯರು ಇಲ್ಲಿನ ಹೋಟೆಲ್‌ಗಳಲ್ಲಿ ಕೆಲಸ ಮಾಡಬೇಕಿರಲಿಲ್ಲ. ಇಲ್ಲಿ ಎಷ್ಟು ದುಡಿದರೂ ಸಾಲದು. ನೆಮ್ಮದಿಯ ಬದುಕು ಕಟ್ಟಿಕೊಳ್ಳುವುದಿರಲಿ, ಊರಿನಲ್ಲಿರುವ ತಂದೆತಾಯಿಗೆ ಹಣ ಕಳಿಸಲು ಆಗಲ್ಲ' ಎಂದು ಈಶಪ್ಪ ಹೇಳುವಾಗ, ಕಣ್ಣಂಚಿನಲ್ಲಿ ನೀರಿತ್ತು. ವಿಜಯಪುರ ಜಿಲ್ಲೆ ಇಂಡಿ ತಾಲ್ಲೂಕಿನ ಗ್ರಾಮವೊಂದರ ಈಶಪ್ಪಗೆ ಹೇಳಲಾಗದಷ್ಟು ಸಂಕಟ ಇತ್ತು.

ಚಿಕ್ಕಬಳ್ಳಾಪುರ ಜಿಲ್ಲೆಯ ಗೌರಿಬಿದನೂರಿನ ನರಸಿಂಹಮೂರ್ತಿ ಮತ್ತು ಸಲೀಮ್ ಅವರ ಪರಿಸ್ಥಿತಿ ಕೂಡಭಿನ್ನವಾಗಿಲ್ಲ.ಕೆಲಸಕ್ಕಾಗಿಅವರುಆಂಧ್ರಪ್ರದೇಶದ ಹಿಂದೂಪುರ, ಅನಂತಪುರಕ್ಕೆ ಹೋಗಬೇಕು. ಅಲ್ಲಿನ ಸ್ಟೀಲ್, ಸಿಮೆಂಟ್ ಕಾರ್ಖಾನೆಯಲ್ಲಿ ಕೆಲಸ ಮಾಡಬೇಕು. 'ಬೆಂಗಳೂರಿಗಿಂತ ನಮಗೆ ಈ ಊರುಗಳೇ ಹತ್ತಿರ. ಓದು, ಬರಹ ಕಲಿತಿದ್ದು ಕಡಿಮೆ. ಊರಿನಲ್ಲಿ ಕೆಲಸಕ್ಕಾಗಿ ಅಲೆಯುವ ಬದಲು ಆಂಧ್ರಪ್ರದೇಶದ ಫ್ಯಾಕ್ಟರಿಗೆ ಹೋಗ್ತೀವಿ. ಬದುಕಿಗೆ ಇದು ಅಲ್ಲದೇ ಬೇರೆ ದಾರಿಯಿಲ್ಲ' ಎಂದು ಇಬ್ಬರೂ ಸಂಕಷ್ಟ ತೋಡಿಕೊಂಡರು.

ಉತ್ತರ ಕನ್ನಡ ಜಿಲ್ಲೆಯ ಕಾರವಾರ ತಾಲ್ಲೂಕಿ ಗೋಟೆಗಾಳಿ ಗ್ರಾಮದ ಕಲ್ಪೇಶ್ ನಾಯ್ಕ ರಸಾಯನಶಾಸ್ತ್ರದಲ್ಲಿ ಎಂ.ಎಸ್ಸಿ ಪದವೀಧರ. ಜಿಲ್ಲೆಯಲ್ಲಿ ಕೆಲಸ ಸಿಗದಿದ್ದಕ್ಕೆ ಗೋವಾ ರಾಜ್ಯದ ವೆರ್ನಾ ಕೈಗಾರಿಕಾ ಪ್ರದೇಶದಲ್ಲಿನ ಔಷಧ ತಯಾರಿಕೆ ಕಂಪನಿಯಲ್ಲಿ ಉದ್ಯೋಗಿ ಆಗಿದ್ದಾರೆ. ಅವರಂತೆಯೇ ಮೂರು ಸಾವಿರಕ್ಕೂ ಹೆಚ್ಚು ಮಂದಿ ಉದ್ಯೋಗಕ್ಕಾಗಿ ಗೋವಾ ಮೊರೆ ಹೋಗಿದ್ದಾರೆ.

ಕಲಿತ ವಿದ್ಯೆಗೆ ತಕ್ಕ ಶಿಕ್ಷಣ ಇಲ್ಲಿ ಸಿಗುತ್ತಿಲ್ಲ. ಕೈತುಂಬ ಅಲ್ಲದಿದ್ದರೂ, ಜೀವನ ನಿರ್ವಹಣೆಗೆ ಅನಿವಾರ್ಯ ವೇತನಕ್ಕಾಗಿ ನಸುಕಿನಲ್ಲೇ ಊರು ಬಿಟ್ಟು 80 ಕಿ.ಮೀ ದೂರದ ಗೋವಾಕ್ಕೆ ಹೋಗಬೇಕು.

ಮರಳಿ ಮನೆ ಸೇರುವುದು ತಡರಾತ್ರಿ. ವಯಸ್ಸಾದ ತಂದೆತಾಯಿಯ ಮುಖ, ಊರಿನ ಹಗಲಿನ ವಾತಾವರಣ ನೋಡುವುದು ವಾರಕ್ಕೆ ಒಮ್ಮೆ ಮಾತ್ರ' ಎಂಬ ನೋವು ಮಾಜಾಳಿ ಗ್ರಾಮದ ವಿರಾಜ್ ಶಿರೋಡ್ಕರ್ ಅವರದ್ದು.

ಕಲ್ಪೇಶ್ ನಾಯ್ಕ್ ಅವರಿಗೂ ಇದು ಹೊರತುಪಡಿಸಿ, ಅನ್ಯಮಾರ್ಗವಿಲ್ಲ.

ಕೆಲಸಕ್ಕಾಗಿ ಗೋವಾಕ್ಕೆ ಹೋಗುವ ಹಾದಿ ಸುಲಭವಲ್ಲ. ವರ್ನಾಗೆ ಹೋಗಲು ನಸುಕಿನ 5.40ಕ್ಕೆ ಕಾರವಾರದ ಶಿರವಾಡದಿಂದ ಹೊರಡುವ ಡೆಮು ರೈಲು ಹತ್ತಬೇಕು. ಅಸ್ನೋಟಿ, ಶಿರವಾಡದ ರೈಲು ನಿಲ್ದಾಣದಲ್ಲಿ ರೈಲು ಏರಲು ನೂಕುನುಗ್ಗಲು ಆಗುತ್ತದೆ. ಅದೇ ರೈಲು ರಾತ್ರಿ 9 ಗಂಟೆಗೆ ಶಿರವಾಡಕ್ಕೆ ಮರಳುತ್ತದೆ. ಇದು ನಿತ್ಯದ ಸವಾಲು, ಸಂಕಟ.

# ಶ್ರದ್ಧೆ, ಭಕ್ತಿಯಿಂದ ನೆರವೇರಿದ ಅರ್ಕಾಟ್ ದರ್ಗಾ ಉರುಸು

**ವಿಜಯಪುರ:** ಪವಿತ್ರ ಪುಷ್ಪಗಳಿಂದ ರೂಪಿಸಲಾದ ಬೃಹತ್ ಗಾತ್ರದ ಪಂಚ ಝೀಲಾಗಳು (ವೃತ್ತಾಕಾರದ ಪುಷ್ಪಾಲಂಕಾರ).

ಮುಗಿಲು ಮುಟ್ಟಿದ ನಾರಾಯೇ ತಕ್ಬೀರ್ ಅಲ್ಲಾಹು ಅಕ್ಬರ್ ಎಂಬ ಪವಿತ್ರ ಉದ್ಘೋಷಗಳೊಂದಿಗೆ ಹಜರತ ಗೌಸ ಏ ಅಜಂ ಅವರ ಸ್ಮರಣೆ ಹಾಗೂ ಸರ್ವಧರ್ಮ ಸಮನ್ವಯತೆಯ ಕೇಂದ್ರವಾಗಿರುವ ಹಜರತ್ ಅರ್ಕಾಟ್ ದರ್ಗಾದ ಉರುಸು ಶ್ರದ್ಧೆ, ಭಕ್ತಿಯಿಂದ ನಡೆಯಿತು.

ಅರ್ಕಾಟ್ ದರ್ಗಾದ ಸಜ್ಜಾದೆ ನಶೀನ್ ಸೈಯ್ಯದ್ ಇಕ್ಬಾಲ್ ಪೀರಾ ಹಾಗೂ ಡಾ.ತಖೀಪೀರಾ ಹುಸೈನಿ ಅವರ ನೇತೃತ್ವದಲ್ಲಿ ನಡೆದ ಈ ಯಾತ್ರೆಯಲ್ಲಿ ಸಾವಿರಾರು ಸಂಖ್ಯೆಯ ಯುವಕರು ಮೆರವಣಿಗೆಯಲ್ಲಿ ಹೆಜ್ಜೆ ಹಾಕಿದರು.

ಸಾವಿರಾರು ಸಂಖ್ಯೆಯಲ್ಲಿ ಭಕ್ತಾದಿಗಳು 'ನಾರಾಯೇ ತಕ್ಬೀರ್ ಅಲ್ಲಾಹು ಅಕ್ಬರ್' ಎಂದು ಭಕ್ತಿಭಾವದಿಂದ ಘೋಷಣೆ



ಮೊಳಗಿಸುತ್ತಾ,

ಪವಿತ್ರ ಧ್ವಜಗಳನ್ನು ಕೈಯಲ್ಲಿ ಹಿಡಿದು ಮೆರವಣಿಗೆಯಲ್ಲಿ ಪಾಲ್ಗೊಂಡರು.

ಜಾಮೀಯಾ ಮಸಜೀದ, ಶಹಾಪೇಟಿ, ಶಹಾಪೂರ ದರ್ವಾಜಾ,

ಮದೀನಾ ನಗರ, ಬಡಿಕಮಾನ್ ಹೀಗೆ ನಾನಾ ಭಾಗಗಳಿಂದ ಭಕ್ತಾದಿಗಳು ಮೆರವಣಿಗೆಯಲ್ಲಿ ಪಾಲ್ಗೊಂಡರು.

ವಿಜಯಪುರ ಅಷ್ಟೇ ಅಲ್ಲದೇ ಬಾಗಲಕೋಟೆ, ಬೆಳಗಾವಿ, ಕಲಬುರ್ಗಿ, ಹುಬ್ಬಳ್ಳಿ ಸೇರಿದಂತೆ ನೆರೆಯ ಮಹಾರಾಷ್ಟ್ರದ ಸೊಲ್ಲಾಪೂರ, ಪುಣೆ, ಗುಜರಾತ್, ಆಂಧ್ರಪ್ರದೇಶ, ತೆಲಂಗಾಣದಿಂದಲೂ ಭಕ್ತ ಸಮೂಹ ಆಗಮಿಸಿ ಮೆರವಣಿಗೆಯಲ್ಲಿ ಭಾಗವಹಿಸಿತು.

ವಿಜಯಪುರದ ಸೊಲ್ಲಾಪೂರ ನಾಕಾದಿಂದ ಆರಂಭಗೊಂಡ ಈ ಯಾತ್ರೆ ಗಾಂಧಿವೃತ್ತ, ಬಡಿಕಮಾನ್, ಜಾಮೀಯಾ ಮಸೀದಿ ರಸ್ತೆ ಸೇರಿದಂತೆ ವಿವಿಧ ಪ್ರಮುಖ ಮಾರ್ಗಗಳಲ್ಲಿ ಸಂಚರಿಸಿ ಅರ್ಕಾಟ್ ದರ್ಗಾ ತಲುಪಿ ಸಂಪನ್ನಗೊಂಡಿತ್ತು.

ದಾರಿಯುದ್ದಕ್ಕೂ ಭಕ್ತಾದಿಗಳಿಗೆ ಕುಡಿಯುವ ನೀರು ಹಾಗೂ ತಂಪು ಜ್ಯೂಸ್ ವ್ಯವಸ್ಥೆ ಮಾಡಲಾಗಿತ್ತು.

ಧರ್ಮ ಸಂದೇಶ

ಧರ್ಮಗುರು ಹಾಗೂ ಆಯುರ್ವೇದ ವೈದ್ಯ ಡಾ.ಸೈಯ್ಯದ್ ತಖೀಪೀರಾ ಹುಸೈನಿ ಅವರು ಧರ್ಮ ಸಂದೇಶ ನೀಡಿ ಮಾತನಾಡಿ, ಹಜರತ್ ಗೌಸ್ ಪಾಕ್ ಅವರು ಒಬ್ಬ ಶ್ರೇಷ್ಠ ವ್ಯಕ್ತಿತ್ವವುಳ್ಳ ಚೇತನ, ಮಾನವೀಯತೆಗೆ ಹೆಸರಾಗಿದ್ದ ಅವರು ಶಾಂತಿ, ಸದ್ಭಾವದ ಸಂದೇಶ ಸಾರಿದ್ದಾರೆ, ಅವರತತ್ವಗಳನ್ನುನಾವುಅಳವಡಿಸಿಕೊಂಡು ಮುನ್ನಡೆಯಬೇಕು ಎಂದರು.

ವಿಜಯಪುರದ ಐತಿಹಾಸಿಕ ಅರ್ಕಾಟ್ ದರ್ಗಾ ದುವಾ-ದವಾಗೆ ಹೆಸರುವಾಸಿಯಾಗಿದೆ, ಭಕ್ತಿಭಾವದ ಕೇಂದ್ರವಾಗಿದೆ ಎಂದರು.

ನಮ್ಮ ಭವ್ಯ ಭಾರತದ ಸಮೃದ್ಧಿಗಾಗಿ ದುವಾ ಮಾಡಲಾಗುವುದು,

ಪ್ರತಿಯೊಬ್ಬ ನಿವಾಸಿಗಳು ಸಂತೋಷವಾಗಿರಬೇಕು,

ಸಮೃದ್ಧವಾಗಿರಬೇಕು ಎಂಬುದು ಸೂಫಿ ಸಂತರ ತತ್ವ,

ಈ ತತ್ವ ಪಾಲಿಸಿ ಜೀವನದಲ್ಲಿ ಮುನ್ನಡೆಯೋಣ ಎಂದರು.

# ನ.1 ರಿಂದ ಕಬ್ಬು ನುರಿಸುವ ಕಾರ್ಯ ಆರಂಭಿಸಿ



**ವಿಜಯಪುರ :** ಜಿಲ್ಲೆಯಲ್ಲಿ ಪಕ್ವವಾಗಿರುವ ಕಬ್ಬನ್ನು ಆದ್ಯತೆಯ ಮೇಲೆ ಕಟಾವು ಮಾಡಿ ನವೆಂಬರ್ 1 ರಿಂದ ಕಬ್ಬು ನುರಿಸುವ ಕಾರ್ಯ ಆರಂಭಿಸಿ ಕಬ್ಬು ಪೂರೈಸಿದ ರೈತರಿಗೆ 14 ದಿನಗಳೊಳಗಾಗಿ ಕಬ್ಬಿನ ಹಣ ಪಾವತಿಸಲು ಸಕ್ಕರೆ ಕಾರ್ಖಾನೆ ಮಾಲೀಕರಿಗೆ ಜಿಲ್ಲಾಧಿಕಾರಿ ಡಾ.ಆನಂದ್ ಕೆ.ಸೂಚನೆನೀಡಿದ್ದಾರೆ.

ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಶನಿವಾರ ಸಕ್ಕರೆ ಕಾರ್ಖಾನೆಗಳ ಮಾಲೀಕರೊಂದಿಗೆ ಸಭೆ ನಡೆಸಿದ ಅವರು, ಕಬ್ಬು ಅಭಿವೃದ್ಧಿ ಆಯುಕ್ತರು ಹಾಗೂ ಸಕ್ಕರೆ ನಿರ್ದೇಶನಾಲಯವು ಪ್ರತಿ ಟನ್ ಕಬ್ಬಿಗೆ ದರ ನಿಗದಿ ಪಡಿಸಿದಂತೆ ಪಾವತಿಸಬೇಕು ಎಂದು ಹೇಳಿದರು.

ಚಡಚಣ ತಾಲ್ಲೂಕಿನ ಹಾವಿನಾಳ ಸಕ್ಕರೆ ಕಾರ್ಖಾನೆ 3594, ಭೀಮಾಶಂಕರ ಸಹಕಾರಿ ಸಕ್ಕರೆ ಕಾರ್ಖಾನೆ 3291,

ಇಂಡಿ ತಾಲ್ಲೂಕಿನ ಹಿರೇಬೇವನೂರಿನ ಇಂಡಿಯನ್ ಕೇನ್ 3415, ನಾದ ಬಿ.ಕೆ. ಜಮಖಂಡಿ ಶುಗರ್ಸ್ 3346, ಆಲಮೇಲ ತಾಲ್ಲೂಕಿನ ಕೆಪಿಆರ್ ಶುಗರ್ಸ್ 3291, ಮಲಘಾಣದ ಸಾಯಿಬಸವ ಶುಗರ್ಸ್ 3291, ಸಿಂದಗಿ ತಾಲ್ಲೂಕಿನ ಸಂಗಮನಾಥ ಶುಗರ್ಸ್ 3291, ಮುದ್ದೇಬಿಹಾಳ ತಾಲ್ಲೂಕಿನ ಬಾಲಾಜಿ ಶುಗರ್ಸ್ 3771, ಬಬಲೇಶ್ವರ ತಾಲ್ಲೂಕಿನ ಕಾರಜೋಳದ ಶ್ರೀ ಬಸವೇಶ್ವರ ಶುಗರ್ಸ್ 3775, ಚಿಕ್ಕಗಲಗಲಿಯ ನಂದಿ ಸಹಕಾರಿ ಸಕ್ಕರೆ ಕಾರ್ಖಾನೆ 3810 ನಿಗದಿಪಡಿಸಲಾಗಿದೆ ಎಂದರು.

14 ದಿನಗಳೊಳಗಾಗಿ ಆಯಾ ರೈತರ ಖಾತೆಗೆ ಯಾವುದೇ ವಿಳಂಬವಿಲ್ಲದೆ ಕಬ್ಬಿನ ಮೊತ್ತವನ್ನು ಜಮಾ ಮಾಡುವಂತೆ ಜಿಲ್ಲಾಧಿಕಾರಿ ಕಟ್ಟುನಿಟ್ಟಾಗಿ ಸೂಚಿಸಿದರು.

ಸಭೆಯಲ್ಲಿ ಆಹಾರ ಇಲಾಖೆಯ ಉಪ ನಿರ್ದೇಶಕ ವಿನಯಕುಮಾರ್ ಪಾಟೀಲ, ಕೃಷಿ ಜಂಟಿ ನಿರ್ದೇಶಕ ಶಿವನಗೌಡ ಪಾಟೀಲ, ಸಹಕಾರಿ ಸಂಘಗಳ ಉಪ ನಿಬಂಧಕ ಹಾಗೂ ಭೀಮಾಶಕರ ಸಕ್ಕರೆ ಕಾರ್ಖಾನೆ ಹಾಗೂ ನಂದಿ ಸಕ್ಕರೆ ಕಾರ್ಖಾನೆಯ ವ್ಯವಸ್ಥಾಪಕ ನಿರ್ದೇಶಕರಾದ ಭಾಗ್ಯಶ್ರೀ, ಪರಿಸರ ಅಧಿಕಾರಿ ವಿವೇಕ, ಜಿಲ್ಲೆಯ ವಿವಿಧ ಸಕ್ಕರೆ ಕಾರ್ಖಾನೆಯ ಮಾಲೀಕರು ಹಾಗೂ ವ್ಯವಸ್ಥಾಪಕ ನಿರ್ದೇಶಕರು ಉಪಸ್ಥಿತರಿದ್ದರು.

# ಬಿಜೆಪಿ ನಿಯೋಗದಿಂದ ಬೆಳೆ ಹಾನಿ ಸಮೀಕ್ಷೆ: ರೈತರ ಅಹವಾಲು ಕೇಳಿದ ಬಿಜೆಪಿ ಮುಖಂಡರು

**ವಿಜಯಪುರ :** ಧಾರಾಕಾರ ಮಳೆ, ಭೀಮೆ ಹಾಗೂ ಡೋಣಿ ನದಿ ಪ್ರವಾಹದಿಂದ ಹಾನಿಗೊಳಗಾಗಿರುವ ಪ್ರದೇಶಗಳಿಗೆ ಹಾಗೂ ಜಮೀನುಗಳಿಗೆ ವಿಧಾನಸಭೆ ಪ್ರತಿಪಕ್ಷದ ನಾಯಕ ಆರ್. ಅಶೋಕ, ವಿಧಾನ ಪರಿಷತ್ ಪ್ರತಿಪಕ್ಷ ಮುಖ್ಯಸಚೇತಕ ಎನ್.ರವಿಕುಮಾರ್, ಮಾಜಿ ಸಚಿವ ಹಾಗೂ ಹಾಲಿ ವಿಧಾನ ಪರಿಷತ್ ಸದಸ್ಯ ಸಿ.ಟಿ. ರವಿ ಸೇರಿದಂತೆ ಅನೇಕ ಹಿರಿಯ ನಾಯಕರ ತಂಡ ಭೇಟಿ ನೀಡಿ ಹಾನಿ ಸಮೀಕ್ಷೆ ನಡೆಸಿ ರೈತರ ಅಹವಾಲು ಆಲಿಸಿತು.

ಅಂಜುಟಗಿ, ಅಗರಖೇಡ, ಮಿರಗಿ, ದೇವಣಗಾಂವ ಸೇರಿದಂತೆ ಹಲವಾರು ಗ್ರಾಮಗಳಿಗೆ ಭೇಟಿ ನೀಡಿ ಪ್ರವಾಹ ಪರಿಸ್ಥಿತಿ ಅವಲೋಕಿಸಿದರು.

ಅಕಾಲಿಕ ಮಳೆ ಹಾಗೂ ನದಿ ಪ್ರವಾಹದಿಂದ ದೊಡ್ಡ ಮಟ್ಟದ ನೀರು ಹೊಲಗಳಿಗೆ ನುಗ್ಗಿದ ಪರಿಣಾಮ ಬೆಳೆಗಳಿಗೆ ಆಗಿರುವ ಹಾನಿ ಕಂಡು ಅಶೋಕ ಒಂದು ಕ್ಷಣ ಶಾಕ್ ಆದರು. ಅಪಾರ ಪ್ರಮಾಣದ ತೊಗರಿ, ಸೂರ್ಯಪಾನ,

ಕಬ್ಬು ನೀರಿನ ಪ್ರವಾಹಕ್ಕೆ ಸಿಲುಕಿದ್ದನ್ನು ಕಂಡು ಆತಂಕ ವ್ಯಕ್ತಪಡಿಸಿದರು.

ಜೊತೆಗೆ ಮಳೆಯಿಂದ ಹಾನಿಗೀಡಾಗಿರುವ ಮನೆಗಳನ್ನು ವೀಕ್ಷಿಸಿ ಜಲಾವೃತವಾಗಿರುವ ಮನೆಗಳಿಗೂ ಭೇಟಿ ನೀಡಿ ಅಹವಾಲು ಆಲಿಸುವ ಕೆಲಸ ಮಾಡಿದರು.



ಬಂಗಾರ ವರ್ಣದಿಂದ ಕಂಗೊಳಿಸುವ ಸೂರ್ಯಪಾನ ಹೊಲ ನೋಡುವುದೇ ಒಂದು ಹಬ್ಬ, ಆದರೆ ಧಾರಾಕಾರ ಮಳೆ ಹಾಗೂ ನದಿ ಪ್ರವಾಹದಿಂದಾಗಿ ದೊಡ್ಡ ಮಟ್ಟದಲ್ಲಿ ನೀರಿನ ಹರಿವಿನಿಂದಾಗಿ ಸೂರ್ಯಪಾನ ಬಾಡಿ ಕಪ್ಪು ಬಣ್ಣಕ್ಕೆ ತಿರುಗಿದ್ದನ್ನು ಕಂಡು ಪ್ರತಿಪಕ್ಷನಾಯಕ ಆರ್. ಅಶೋಕ ಸೇರಿದಂತೆ ಅನೇಕ ಮುಖಂಡರು ದಂಗಾದರು.

ಮಿರಗಿಯಲ್ಲಿ ರೈತರು ಬೆಳೆದ ಸೂರ್ಯಪಾನ ಸಂಪೂರ್ಣ ಹಾನಿಗೀಡಾಗಿರುವುದನ್ನು ವೀಕ್ಷಿಸಿದರು.

ಈ ವೇಳೆ ರೈತರೆಲ್ಲರೂ ತಮ್ಮ ನೋವು ವ್ಯಕ್ತಪಡಿಸಿ ಮಳೆ ಉತ್ತಮವಾಗಿ ಬಂದಿತ್ತು, ಹೀಗಾಗಿ ಈ ಬಾರಿ ಬೆಳೆ ಬರುವ ಸಾಧ್ಯತೆ ಇತ್ತು, ನಮ್ಮ ಕಷ್ಟ ನೀಗುವ ನಿರೀಕ್ಷೆ ಇತ್ತು, ಆದರೆ ಭಾರೀ ಮಳೆ ಹಾಗೂ ಪ್ರವಾಹ ನಮ್ಮನ್ನು ಮತ್ತೆ ತೊಂದರೆಗೆ ನೂಕಿದೆ. ಯಾರೂ ನಮ್ಮ ಅಹವಾಲು ಆಲಿಸಿಲ್ಲ. ನೀವು ಕೂಡಾ ಬರೀ ಬಂದು ಹೋಗಬೇಡಿ. ನಮಗೆ ನೆರವಾಗಿ, ಸರ್ಕಾರಕ್ಕೆ ನಮ್ಮ ಸಮಸ್ಯೆಯನ್ನು ವಿವರಿಸಿ ಎಂದು ಅನೇಕ ರೈತರು ಹೇಳಿದರು. ಆಗ ಭರವಸೆ ತುಂಬಿದ ಪ್ರತಿಪಕ್ಷ ನಾಯಕ ಆರ್. ಅಶೋಕ, ಸಿ.ಟಿ. ರವಿ ಮೊದಲಾದವರು,ಈ ಸರ್ಕಾರಕ್ಕೆ ಜವಾಬ್ದಾರಿಯೇ ಇಲ್ಲದಂತಾಗಿದೆ, ಇಷ್ಟೊಂದು ತೊಂದರೆ ಎದುರಿಸುತ್ತಿದ್ದರೂ ಸ್ಥಳಕ್ಕೆ ಭೇಟಿ ನೀಡುವ ಸೌಜನ್ಯವೂ ಅವರಿಗೆ ಇಲ್ಲ ಎಂಬುದು ಬೇಜವಾಬ್ದಾರಿ ಸಂಗತಿ. ಆದರೆ ಪ್ರತಿಪಕ್ಷವಾಗಿರುವ ನಾವು ನಿಮ್ಮ ಧ್ವನಿಯಾಗಿ ಸರ್ಕಾರಕ್ಕೆ ಬಿಸಿ ಮುಟ್ಟಿಸುವ ಕೆಲಸ ಮಾಡುತ್ತೇವೆ.

ನಿಮ್ಮ ಜೊತೆ ನಾವಿದ್ದೇವೆ ಭಯಬೇಡ ಎಂದು ಅಭಯ ತುಂಬಿದರು.

ವಿವಿಧ ಗ್ರಾಮಗಳಿಗೆ ಭೇಟಿ ನೀಡಿದ ವೇಳೆ ಅನೇಕ ರೈತರು ತಮ್ಮ ನೋವು ಹಾಗೂ ಬೇಡಿಕೆಗಳನ್ನು ಲಿಖಿತ ರೂಪದಲ್ಲಿ ಪ್ರತಿಪಕ್ಷ ನಾಯಕರಿಗೆ ನೀಡಿದರು.

ಸಂಸದ ರಮೇಶ ಜಿಗಜಿಣಗಿ, ಬಾಗಲಕೋಟೆ ಸಂಸದ ಪಿ.ಸಿ. ಗದ್ದಿಗೌಡರ, ಮಾಜಿ ಸಚಿವರಾದ ಶಶಿಕಲಾ ಜೊಲ್ಲೆ, ಸಚಿವ ಅಪ್ಪಾಸಾಹೇಬ ಪಟ್ಟಣಶೆಟ್ಟಿ, ಮಾಜಿ ಶಾಸಕ ಹಾಗೂ ಬಿಜೆಪಿ ರೈತ ಮೋರ್ಚಾ ಜಿಲ್ಲಾಧ್ಯಕ್ಷ ಎ.ಎಸ್. ಪಾಟೀಲ ನಡಹಳ್ಳಿ, ಮಾಜಿ ಶಾಸಕರಾದ ಸೋಮನಗೌಡ ಪಾಟೀಲ ಸಾಸನೂರ, ರಮೇಶ ಭೂಸನೂರ, ಬಿಜೆಪಿ ಜಿಲ್ಲಾಧ್ಯಕ್ಷ ಗುರುಲಿಂಗಪ್ಪ ಅಂಗಡಿ, ಮುಖಂಡರಾದ ಉಮೇಶ ಕಾರಜೋಳ, ವಿಜುಗೌಡ ಪಾಟೀಲ, ಕಾಸುಗೌಡ ಬಿರಾದಾರ, ಚಂದ್ರಶೇಖರ ಕವಟಗಿ, ಸಂಜೀವ ಐಹೊಳಿ, ಡಾ. ಸುರೇಶ ಬಿರಾದಾರ, ಈರಣ್ಣ ರಾವೂರ, ಮಳುಗೌಡ ಪಾಟೀಲ, ಮಲ್ಲಿಕಾರ್ಜುನ ಜೋಗೂರ, ಸಾಬು ಮಾಶ್ಯಾಳ, ಹನುಮಂತರಾಯ ಬಿರಾದಾರ, ಅನೀಲ ಜಮಾದಾರ, ಸ್ವಪ್ನಾ ಕಣಮುಚನಾಳ, ವಿವೇಕಾನಂದ ಡಬ್ಬಿ, ವಿಕಾಸ ಪದಕಿ,

ಕೃಷ್ಣಾ ಗುನ್ನಾಳಕರ, ಭೀಮಾಶಂಕರ ಹದನೂರ, ಭೀಮನಗೌಡ ಬಿರಾದಾರ, ರಾಜಕುಮಾರ ಸಗಾಯಿ, ಬಸವರಾಜ ಬೈಚಬಾಳ, ವಿಜಯ ಜೋಶಿ ವರಿಸ್ ಕುಲಕರ್ಣಿ ಮೊದಲಾದವರು ಉಪಸ್ಥಿತರಿದ್ದರು.

# ಸಂತ್ರಸ್ತರನ್ನು ಕಚೇರಿಗೆ ಕರೆಸಿ ಪರಿಹಾರ ನೀಡಿದ ತಹಶೀಲ್ದಾರ್

**ಮುದ್ದೇಬಿಹಾಳ :** ತಾಲ್ಲೂಕಿನ ಆರೇಮುರಾಳ ಗ್ರಾಮದಲ್ಲಿ ಅತಿವೃಷ್ಟಿಯಿಂದಾಗಿ ಮನೆಬಿದ್ದು ಮೂವರು ಗಾಯಗೊಂಡಿದ್ದ ಪ್ರಕರಣಕ್ಕೆ ಸಂಬಂಧಿಸಿದಂತೆ ಶನಿವಾರ ಸಂತ್ರಸ್ತರನ್ನು ತಹಶೀಲ್ದಾರ್ ಕಚೇರಿಗೆ ಕರೆಯಿಸಿ ಸರ್ಕಾರದಿಂದ ಬಿಡುಗಡೆಯಾದ ಪರಿಹಾರದ ಆದೇಶ ಪತ್ರವನ್ನು ವಿತರಿಸಿರುವುದು ತೀವ್ರ ಚರ್ಚೆಗೆ ಗ್ರಾಸವಾಗಿದೆ.

ಆರೇಮುರಾಳ ಗ್ರಾಮದಲ್ಲಿ ಮನೆ ಬಿದ್ದು ಅದರಡಿ ಸಿಲುಕಿದ್ದ ಮಲ್ಲವ್ವ ಬಂಡಿವಡ್ಡರ ಸೊಂಟಕ್ಕೆ ಬಲವಾದ ಪೆಟ್ಟು ಬಿದ್ದಿದ್ದು ರುದ್ರಪ್ಪ ಬಂಡಿವಡ್ಡರ ಹಾಗೂ ಅವರ ಮಗಳು ಶಾರದಾ ಬಂಡಿವಡ್ಡರಗೂ ತಲೆಗೆ ಪೆಟ್ಟುಬಿದ್ದು ಗಾಯಗೊಂಡಿದ್ದರು. ಅವರಿಗೆ ಎನ್‌ಡಿಆರ್‌ಎಫ್, ಎಸ್‌ಡಿಆರ್‌ಎಫ ನಿಯಮಾವಳಿ ಅಂತೆ ?5400 ಮೂವರಿಗೆ 16,200 ಪರಿಹಾರ ನೀಡಲಾಗಿದೆ ಎಂದು ಆದೇಶಪತ್ರದಲ್ಲಿ ತಿಳಿಸಲಾಗಿದೆ.

ಈ ವಿಷಯವಾಗಿ ಸುದ್ದಿಗಾರರೊಂದಿಗೆ ಮಾತನಾಡಿದ ಭೋವಿ ಸಮಾಜದ ಮುಖಂಡ ಪರಶುರಾಮ




ನಾಲತವಾಡ , ಮನೆ ಬಿದ್ದು ತೊಂದರೆಯಲ್ಲಿದ್ದ ಸಂತ್ರಸ್ಥರನ್ನೇ ತಹಶೀಲ್ದಾರ್ ಕಚೇರಿಗೆ ಕರೆಯಿಸಿ ಆದೇಶಪತ್ರ ಕೊಡುವ ಬದಲು ಅವರಿದ್ದಲ್ಲಿಯೇ ಹೋಗಿ ಅಧಿಕಾರಿಗಳು ಸಾಂತ್ವನ ಹೇಳಿ ಪರಿಹಾರದ ಆದೇಶ ಪತ್ರ ನೀಡಿದ್ದರೆ ತಾಲ್ಲೂಕು ಆಡಳಿತಕ್ಕೆ ಗೌರವ ಬರುತ್ತಿತ್ತು ಎಂದು ತಿಳಿಸಿದ್ದಾರೆ. ರುದ್ರಪ್ಪ ಬಂಡಿವಡ್ಡರ ತಲೆಗೆ ಪೆಟ್ಟಾಗಿದ್ದರಿಂದ ಕತ್ತಿಗೆ ಪಟ್ಟಿ ಸುತ್ತಿಕೊಂಡು ಬಂದೇ ಪರಿಹಾರದ ಆದೇಶ ಪ್ರತಿ ಪಡೆದುಕೊಂಡರು.

# ಭುಯ್ಯಾರ ಸ್ಥಳಾಂತರಕ್ಕೆ ಗ್ರಾಮಸ್ಥರ ಮನವಿ

**ಇಂಡಿ :** ಭೀಮಾ ನದಿಯ ದಡದಲ್ಲಿರುವ ಭುಯ್ಯಾರ ಗ್ರಾಮಕ್ಕೆ ಶಾಶ್ವತ ಪರಿಹಾರ ಕಲ್ಪಿಸಿಕೊಡಬೇಕು,

ಬೆಳೆ ನಷ್ಟದ ಬಗ್ಗೆ ಶೀಘ್ರದಲ್ಲಿಯೇ ಪರಿಹಾರ ನೀಡಬೇಕು, ಹದಗೆಟ್ಟಿರುವ ರಸ್ತೆಗಳನ್ನು ದುರಸ್ಥಿ ಮಾಡಬೇಕು, ಸಾರ್ವಜನಿಕ ಶೌಚಾಲಯಗಳ ನಿರ್ಮಾಣ ಮಾಡಬೇಕು ಎಂದು ಆಗ್ರಹಿಸಿ ವಿರೋಧ ಪಕ್ಷದ ನಾಯಕ ಆರ್. ಅಶೋಕ ಮತ್ತು ಸಿ.ಟಿ.ರವಿ ಅವರಿಗೆ ಭುಯ್ಯಾರ ಗ್ರಾಮಸ್ಥರು ಶನಿವಾರ ಮನವಿ ಸಲ್ಲಿಸಿದರು.



ಭುಯ್ಯಾರ ಗ್ರಾಮ ಭೀಮಾ ನದಿಯ ಸಮೀಪದಲ್ಲಿಯೇ ಇರುವುದರಿಂದ ಪ್ರತೀ ವರ್ಷ ಪ್ರವಾಹಕ್ಕೆ ಒಳಗಾಗುತ್ತದೆ,

ಕಾರಣ ಗ್ರಾಮವನ್ನು ಬೇರೆ ಕಡೆಗೆ ಸ್ಥಳಂತರಿಸಬೇಕು ಎಂದು ಆಗ್ರಹಿಸಿದರು.

ಪ್ರಸಕ್ತ ವರ್ಷದಲ್ಲಿ ಭೀಮಾ ನದಿಯಲ್ಲಿ ಪ್ರವಾಹ ಉಂಟಾಗಿ ತೊಗರಿ, ಹತ್ತಿ, ಸಜ್ಜೆ, ಮೆಕ್ಕೆಜೋಳ, ಹೆಸರು,

ಉದ್ದು, ಶೇಂಗಾ, ಉಳ್ಳಾಗಡ್ಡಿ, ಮೆಣಸು ಮುಂತಾದ ಬೆಳೆಗಳು ಹಾಳಾಗಿವೆ.

ಕಬ್ಬಿನ ಬೆಳೆಯಲ್ಲಿ ನೀರು ನಿಂತು ಕೊಳೆಯುತ್ತಿದೆ.

ಇದರಿಂದ ರೈತರು ಅಪಾರ ನಷ್ಟದಲ್ಲಿದ್ದಾರೆ. ಕಾರಣ ಈ ಕೂಡಲೇ ರೈತರಿಗೆ ಬೆಳೆ ಪರಿಹಾರ ಕೊಡೊಸಿಕೊಡಬೇಕು ಎಂದು ಮನವಿ ಮಾಡಿಕೊಂಡರು.

ಗ್ರಾಮಸ್ಥರಾದ ಕೃಷ್ಣಾಚಾರ್ಯ ಆಧ್ಯ, ಗಂಗಾಧರ ತಳವಾರ, ರವಿಕಾಂತ ವಗ್ಗೆ, ಪ್ರಭುಲಿಂಗ ಗೋಳಸಾರ, ಬಾಬು ಚಿಕ್ಕಮಣ್ಣೂರ,

ಶ್ಯಾಂತಕುಮಾರ ಬೆಳಮಗಿ,

ಗಡ್ಡುಆಳೂರ, ನಿಂಗಪ್ಪಗೋಲಗೇರಿ, ವಿಕಾಸ ರೈತ ಸಂಘದ ಸದಸ್ಯರು ಉಪಸ್ಥಿತರಿದ್ದರು.

## ಕೈಗೆಟುವ ಬೆಲೆಯಲ್ಲಿ ಸಿಗುವ ಆರೋಗ್ಯಕರ ಪದಾರ್ಥಗಳನ್ನು ಬಿಟ್ಟು, ಕಲುಷಿತ ಪದಾರ್ಥಗಳನ್ನು ಸೇವಿಸಿ ಜನತೆ ಅನಾರೋಗ್ಯಕ್ಕೆ ತುತ್ತಾಗುತ್ತಿದ್ದಾರೆ

# ಪ್ರತಿಯೊಬ್ಬರೂ ತಮ್ಮ ಅಹಾರ ಪದ್ಧತಿಯಲ್ಲಿ ಬದಲಾವಣೆ ತರಬೇಕು

**ಮುದ್ದೇಬಿಹಾಳ:** ಪ್ರತಿನಿತ್ಯ ಬಳಸುವ ಅಹಾರ ಪದಾರ್ಥಗಳಲ್ಲಿಯೇ ಸಾಕಷ್ಟು ಔಷಧೀಯ ಗುಣಗಳಿರುತ್ತವೆ. ಸುಲಭವಾಗಿ, ಕೈಗೆಟುವ ಬೆಲೆಯಲ್ಲಿ ಸಿಗುವ ಜನತೆಯ ಆರೋಗ್ಯಕರ ಪದಾರ್ಥಗಳನ್ನು ಬಿಟ್ಟು, ಕಲುಷಿತ ಪದಾರ್ಥಗಳನ್ನು ಸೇವಿಸಿ ಜನತೆ ಅನಾರೋಗ್ಯಕ್ಕೆ ತುತ್ತಾಗುತ್ತಿದ್ದಾರೆ ಎಂದು ಇಲ್ಲಿನ 5ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾದ ಸಚಿನ್ ಕೌಶಿಕ್ ಅವರು ಬೇಸರ ವ್ಯಕ್ತಪಡಿಸಿದರು.

ಇಲ್ಲಿನ ಸರ್ಕಾರಿ ಪದವಿ ಪೂರ್ವ ಕಾಲೇಜಿನಲ್ಲಿ, ತಾಲೂಕು ಕಾನೂನು ಸೇವಾ ಸಮತಿ, ನ್ಯಾಯವಾದಿಗಳ ಸಂಘ, ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಚೇರಿ, ಆರೋಗ್ಯ ಇಲಾಖೆ, ಸರ್ಕಾರಿ ಪದವಿ ಪೂರ್ವ ಕಾಲೇಜು ಹಾಗೂ ಇತರೆ ಎಲ್ಲ ಸರ್ಕಾರಿ ಇಲಾಖೆಗಳ ಸಂಯುಕ್ತ ಆಶ್ರಯದಲ್ಲಿ ಹಮ್ಮಿಕೊಳ್ಳಲಾಗಿದ್ದ ವಿಶ್ವ ಪೌಷ್ಟಿಕಾಂಶ ದಿನಾಚರಣೆ, ರಾಷ್ಟ್ರೀಯ ಪೋಷಣಾ ಮಾಸಾಚರಣೆ ಮತ್ತು ಅಂತರಾಷ್ಟ್ರೀಯ ಹೆಣ್ಣುಮಗುವಿನ ದಿನಾಚರಣೆ ಸಂಯುಕ್ತ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಅನಾರೋಗ್ಯಕ್ಕೆ ಕಾರಣವಾಗುತ್ತಿರುವುದು ಆಹಾರದ ಕೊರತೆಯಲ್ಲ, ಅಜಾಗರೂಕ ಆಹಾರ ಪದ್ಧತಿ ಎಂಬುದನ್ನ ಪ್ರತಿಯೊಬ್ಬರೂ ಅರಿಯಬೇಕು. ಗ್ರಾಮೀಣ ಪ್ರದೇಶಗಳಲ್ಲಿ ಸುಲಭವಾಗಿ ದೊರೆಯುವ ತಾಜಾ ಹಣ್ಣು, ತರಕಾರಿ, ಧಾನ್ಯ, ಕಾಳುಬೇಳೆಗಳನ್ನು ಉಪಯೋಗಿಸುವುದರಿಂದ ಶೇ.90 ರಷ್ಟು ಕಾಯಿಲೆಗಳನ್ನು ತಡೆಗಟ್ಟಬಹುದು. ಹಾಗಾಗಿ ಇಂದಿನಿಂದಲೇ ಪ್ರತಿಯೊಬ್ಬರೂ ತಮ್ಮ ಅಹಾರ ಪದ್ಧತಿಯಲ್ಲಿ ಬದಲಾವಣೆ ತರಬೇಕು ಎಂದು ತಿಳಿ ಹೇಳಿದರು.



> **ಪೌಷ್ಟಿಕ ಅಹಾರ ಕೇವಲ ವ್ಯಕ್ತಿಯ ಹಕ್ಕು ಮಾತ್ರವಲ್ಲ, ಸಮಾಜದ ಕರ್ತವ್ಯವೂ ಹೌದು. ಅಪೌಷ್ಟಿಕತೆಯ ವಿರುದ್ಧ ಹೋರಾಡುವದು ಅರ್ಥಾಥ್ ಆರೋಗ್ಯಕರ ಸಮಾಜವನ್ನು ಕಟ್ಟುವ ಮೊದಲ ಹೆಜ್ಜೆ. ಇಂದಿನಿದಂದ ಒಟ್ಟಾಗಿ ಶುದ್ಧ, ತಾಜಾ, ಪೌಷ್ಟಿಕ ಅಹಾರವನ್ನು ಪ್ರತಿದಿನ ಸೇವಿಸುತ್ತೇವೆ ಎಂದು ಶಪಥ ಮಾಡೋಣ.**
>
> । ಸಚಿನ್ ಕೌಶಿಕ್. 5ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು.
>
> ---
>
> **ಮಹಿಳೆಯರು ಮತ್ತು ಮಕ್ಕಳು ಸಮಾಜದ ಆಧಾರ ಸ್ಥಂಭಗಳು. ಅವರ ಆರೋಗ್ಯದ ಮೇಲೆ ಒಂದು ಮನೆಯ, ಒಂದು ಸಮುದಾಯದ, ಒಂದು ರಾಷ್ಟ್ರದ ಭವಿಷ್ಯ ನಿಂತಿದೆ. ಅವರಿಗೆ ಪೌಷ್ಟಿಕ ಅಹಾರ ದೊರಕಿಸುವ ಜವಾಬ್ದಾರಿ ಪ್ರತಿಯೊಬ್ಬ ಆಶಾ ಹಾಗೂ ಅಂಗನವಾಡಿ ಕಾರ್ಯಕರ್ತೆಯರಿಗಿದೆ. ಈ ಕಾರ್ಯವನ್ನು ಚಾಚೂ ತಪ್ಪದೇ ಪಾಲಿಸಬೇಕು.**
>
> । ರವೀಂದ್ರಕುಮಾರ ಕಟ್ಟಿಮನಿ.
>
> **ಅಧ್ಯಕ್ಷರು ಕಾನೂನು ಸೇವಾ ಸಮಿತಿ ಹಾಗೂ ಹಿರಿಯ ಸಿವಿಲ್ ನ್ಯಾಯಾಧೀಶರು.**

ತಾಲೂಕು ಕಾನೂನು ಸೇವಾ ಸಮಿತಿಯ ಅಧ್ಯಕ್ಷರೂ ಹಾಗೂ ಹಿರಿಯ ಸಿವಿಲ್ ನ್ಯಾಯಾಧೀಶರಾದ ರವೀಂದ್ರಕುಮಾರ ಕಟ್ಟಿಮನಿ ಅವರು ಮಾತನಾಡಿ, ಮನುಷ್ಯನ ಆರೋಗ್ಯಕ್ಕೆ ಅಹಾರ ಪದ್ಧತಿ ಅತೀ ಮುಖ್ಯ. ಪೌಷ್ಟಿಕ ಅಹಾರ ಸೇವಿಸುವದರಿಂದ ದೇಹದ ಬೆಳವಣಿಗೆ, ಬುದ್ಧಿವಂತಿಕೆ, ಮಾನಸಿಕ ಸಾಮರ್ಥ ಹೆಚ್ಚುತ್ತದೆ.

ಅಪೌಷ್ಟಿಕತೆ ಬೆಳವಣಿಗೆಯನ್ನು ತಡೆಯುತ್ತದೆ. ಅಲ್ಲದೇ ರಕ್ತಹೀನತೆ, ದೌರ್ಬಲ್ಯ ಹಾಗೂ ಅನೇಕ ರೋಗಗಳಿಗೆ ಕಾರಣವಾಗುತ್ತದೆ ಹಾಗಾಗಿ ಪೌಷ್ಟಿಕ ಅಹಾರ ಸೇವಿಸಲು ಪ್ರತಿಯೊಬ್ಬರೂ ಮುಂದಾಗಬೇಕು ಎಂದರು.

ಕಾನೂನು ಸೇವಾ ಸಮಿತಿಯ ಸದಸ್ಯ ಕಾರ್ಯದರ್ಶಿಗಳೂ ಹಾಗೂ ಸಿವಿಲ್ ನ್ಯಾಯಾಧೀಶರಾದ ರಾಮಮೂರ್ತಿ ಎನ್ ಅವರು ಮಾತನಾಡಿ, ಇವತ್ತಿನ ದಿನಾಚರಣೆ ಈ ದಿನಕ್ಕೆ ಮಾತ್ರ ಸೀಮಿತವಾಗಬಾರದು. ಪ್ರತಿದಿನವೂ ಆಚರಣೆಯಲ್ಲಿರಬೇಕು. ಭಾರತ ಸಂವಿಧಾನವು ಪ್ರತಿಯೊಬ್ಬ ನಾಗರಿಕನಿಗೂ ಆರೋಗ್ಯಕರ ಜೀವನ ನಡೆಸುವ ಹಕ್ಕು ನೀಡಿದೆ. ಸರ್ಕಾರ ಬಿಸಿಯೂಟ ಯೋಜನೆ, ಅಂಗನವಾಡಿ ಯೋಜನೆಗಳಂತಹ ಹಲವಾರು ಯೋಜನೆಗಳನ್ನು ಜಾರಿಗೆ ತಂದಿದೆ. ಅಹಾರ ಸುರಕ್ಷತಾ ಅಧಿನಿಯಮ, ರಾಷ್ಟ್ರೀಯ ಅಹಾರ ಭದ್ರತಾ ಅಧಿನಿಯಮಗಳಂತಹ ಕಾನೂನುಗಳನ್ನೂ ಜಾರಿಗೆ ತರಲಾಗಿದೆ. ಸಮಾಜದ ಪ್ರತಿಯೊಬ್ಬ ಸದಸ್ಯನಿಗೂ ಪೌಷ್ಟಿಕ ಅಹಾರ ಒದಗಿಸುವದು ಕೇವಲ ಸರ್ಕಾರದ ಹೊಣೆಗಾರಿಕೆ ಮಾತ್ರವಲ್ಲ. ನಮ್ಮೆಲ್ಲರ ಜವಾಬ್ದಾರಿಯೂ ಹೌದು ಎಂದರು.

ನ್ಯಾಯವಾದಿಗಳ ಸಂಘದ ಅಧ್ಯಕ್ಷ ಶಶಿಕಾಂತ ಮಾಲಗತ್ತಿ, ಆರೋಗ್ಯ ಇಲಾಖೆಯ ಅನಸೂಯಾ ತೇರದಾಳ ಮಾತನಾಡಿದರು. ಸಿಡಿಪಿಓ ಕಚೇರಿಯ ಮೇಲ್ವಿಚಾರಕಿ ರಾಜಶ್ರೀ ಶೀಳಿನ ವಿಶೇಶ ಉಪನ್ಯಾಸ ನೀಡಿದರು. ಇದೇ ವೇಳೆ ಹೆಣ್ಣು ಮಕ್ಕಳ ಹುಟ್ಟುಹಬ್ಬ, ಅನ್ನ ಪ್ರಾಶನ, ಶ್ರೀಮಂತ ಕಾರ್ಯಕ್ರಮಗಳೂ ಕೂಡ ಜರುಗಿದವು. ಕಿರಿಯ ಸರ್ಕಾರಿ ಸಹಾಯಕ ಅಭಿಯೋಜಕ ಬಸವರಾಜ ಆಹೇರಿ, ನ್ಯಾ.ಸಂಘದ ಸಹ ಕಾರ್ಯದರ್ಶಿ ಬಿ.ಪಿ.ಮ್ಯಾಗೇರಿ, ನ್ಯಾಯವಾದಿ ಚೇತನ ಶಿವಶಿಂಪಿ, ತಾಲೂಕು ಸೇವಾ ಸಮಿತಿಯ ಆಡಳಿತ ಸಹಾಯಕ ಅರವಿಂದ ಕುಂಬಾರ, ದಲಾಯತ್ ಮಹಾಂತೇಶ ಹಚರೆಡ್ಡಿ ಸೇ–ರಿದಂತೆ ಹಲವರು ಭಾಗಿಯಾಗಿದ್ದರು. ಶಿಶು ಅಭಿವೃದ್ಧಿ ಯೋಜನಾಧಿಕಾರಿ ಶಿವುಮೂರ್ತಿ ಕುಂಬಾರ ಪ್ರಾಸ್ತಾವಿಕವಾಗಿ ಮಾತನಾಡಿದರು. ಕಚೇರಿಯ ಮೇಲ್ವಿಚಾರಕಿ ಕಲಾವತಿ ಬಳುಂಡಗಿ ಕಾರ್ಯಕ್ರಮವನ್ನು ನಿರ್ವಹಿಸಿದರು.

# ಬಸವರಾಜ ಕೆಂಧೂಳಿ ನಿಧನ

**ರಬಕವಿ :** ಇಲ್ಲಿಯ ಎಂ. ವ್ಹಿ. ಪಟ್ಟಣ ಸಂಂ–ಯುಕ್ತ ಪದವಿ ಪೂರ್ವ ಕಾಲೇಜಿನ ನಿವೃತ್ತ ಪ್ರಾಚಾರ್ಯ, ವಾಣಿಜ್ಯ ಶಾಸ್ತ್ರ ವಿಭಾಗದ ಉಪನ್ಯಾಸಕ, ಜಾನಪದ ಗಾಯಕ, ಬಣಗಾರ (ನಾಗಲಿಕ) ಸಮಾಜದ ಹಿರಿಯರಾಗಿದ್ದ ಬಸವರಾಜ ಮಡಿವಾಳಪ್ಪ ಕೆಂಧೂಳಿ ಅವರು ತಮ್ಮ 74 ನೆಯ ವಯಸ್ಸಿನಲ್ಲಿ ಅಕ್ಟೋಬರ್ 3 ರಂದು ಹುಬ್ಬಳ್ಳಿಯಲ್ಲಿ ನಿಧನ ಹೊಂದಿದರು. ಅವರು ಮೂಲತಃ ವಿಜಯಪುರ ಜಿಲ್ಲೆಯ ಬಸವನ ಬಾಗೇವಾಡಿ ತಾಲೂಕಿನ



ಹುಣಸ್ಯಾಳ ಗ್ರಾಮದವರು. ಹುಟ್ಟೂರಿನಲ್ಲಿ ಪ್ರಾಥಮಿಕ ಶಿಕ್ಷಣ ಹಾಗೂ ಹಳ್ಳೂರಿನಲ್ಲಿ ಹೈಸ್ಕೂಲ್ ಶಿಕ್ಷಣ, ವಿಜಯಪುರದಲ್ಲಿ ಪದವಿ ಪೂರೈಸಿದರು. ರಬಕವಿಯ ಎಂ. ವಿ. ಪಟ್ಟಣ ಸಂಯುಕ್ತ ಪದವಿಪೂರ್ವ ಕಾಲೇಜಿನ ಪ್ರಾಂಶುಪಾಲ ಹುದ್ದೆಯಿಂದ ನಿವೃತ್ತರು. ಜಾನಪದ ಸಾಹಿತ್ಯದೆಡೆಗೆ ಒಲವು. ಜಾನಪದ ಹಾಡುಗಳ ಸುಮಾರು 42 ಧ್ವನಿ ಸುರುಳಿಗಳು ಹೊರ ಬಂದಿವೆ. ಪದ್ಯ ಹಾಡಿ ಬುದ್ಧಿ ಕಲಿಸ್ಯಾರ–ಎಂಬುದು ಇವರ ಕವನ ಸಂಕಲನ. ಬೆಂಗಳೂರಿನ ಅಂತಾರಾಷ್ಟ್ರೀಯ ಸಾಮಾಜಿಕ ಅಭಿವೃದ್ಧಿ ಸಂಘದವರು ನೀಡುವ ಡಾ. ಅಬ್ದುಲ್ ಕಲಾಂ ಲೈಫ್ ಟೈಮ್ ಅಚ್ಯೀವಮೆಂಟ್ ಪ್ರಶಸ್ತಿ, ಇಲಕಲ್ ಮಹಾಂತ ಸ್ವಾಮಿಗಳಿಂದ ಬಸವ ಭೂಷಣ ಪ್ರಶಸ್ತಿ, ಬಳ್ಳಾರಿಯ ಸ್ಫೂರ್ತಿ ಕಲಾವಿದರ ಸಂಘದಿಂದ ಗಾನ ಕೋಗಿಲೆ ಪ್ರಶಸ್ತಿ, ಹುಬ್ಬಳ್ಳಿಯ ಪ್ರೊಬಸ್ ಕ್ಲಬ್ ದಿಂದ ಸಿರಿಕಂಠ ಪ್ರಶಸ್ತಿ ಲಭಿಸಿವೆ. ಅವರು ತಮ್ಮ ಹಿಂದೆ ಪತ್ನಿ, ಇಬ್ಬರು ಪುತ್ರರು ಓರ್ವ ಪುತ್ರಿ ಹಾಗೂ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಹುಬ್ಬಳ್ಳಿಯ ಕೇಶ್ವಾಪುರದ ರುದ್ರಭೂಮಿಯಲ್ಲಿ ಅವರ ಅಂತ್ಯಕ್ರಿಯೆ ನಡೆಯಿತು. ದೇವರು ಅವರ ಆತ್ಮಕ್ಕೆ ಚಿರಶಾಂತಿ ನೀಡಲಿ.

**ಗವಾಯಿ ಅವರತ್ತ "ಶೂ" ಎಸೆಯಲು ಯತ್ನಿಸಿದ ಪ್ರಕರಣ**

# ವಕೀಲ ರಾಕೇಶ್ ಕಿಶೋರ್ ಮೇಲೆ ದೇಶದ್ರೋಹದ ಕೇಸ್ ದಾಖಲಿಸಲು ಆಗ್ರಹಿಸಿ ಪ್ರತಿಭಟನೆ



**ಕಲಬುರಗಿ:** ಸುಪ್ರೀಂಕೋರ್ಟ್ ನ್ಯಾಯಮೂರ್ತಿ ಬಿ.ಆರ್.ಗವಾಯಿ ಅವರ ಮೇಲೆ ಶೂ ಎಸೆಯಲು ಯತ್ನಿಸಿದ ವಕೀಲ ರಾಕೇಶ್ ಕಿಶೋರ್ ಮೇಲೆ ದೇಶದ್ರೋಹದ ಕೇಸ್ ದಾಖಲಿಸಬೇಕು ಎಂದು ಆಗ್ರಹಿಸಿ ಬೌದ್ಧ ಉಪಾಸಕರ ಸಂಘದ ನೇತೃತ್ವದಲ್ಲಿ ನಗರದಲ್ಲಿ ಇಂದು ಪ್ರತಿಭಟನೆ ನಡೆಸಲಾಯಿತು.

ಮಲ್ಲಪ್ಪ ಹೊಸಮನಿ, ಅರ್ಜುನ ಭದ್ರೆ, ಹಣಮಂತ ಬೋಧನಕರ, ಎ.ಬಿ.ಹೊಸಮನಿ, ರಾಜು ಕಪನೂರ, ದಿನೇಶ ದೊಡ್ಡಮನಿ, ದೇವಿಂದ್ರ ಸಿನ್ನೂರ, ಪ್ರಕಾಶ ಮೂಲಭಾರತಿ, ಅರ್ಜುನ ಗೊಬ್ಬರ, ಸುರೇಶ ಹಾದಿಮನಿ, ಎಸ್.ಜಿ.ಭಾರತಿ, ಬಸವರಾಜ ಕಣ್ಣೂರ ಅವರ ನೇತೃತ್ವದಲ್ಲಿ ನಗರದ ಜಗತ್ ವೃತ್ತದಲ್ಲಿ ಪ್ರತಿಭಟನೆ ನಡೆಸಿ ಟಾಯರ್ಗೆ ಬೆಂಕಿ ಹಚ್ಚಿ ಆಕ್ರೋಶ ವ್ಯಕ್ತಪಡಿಸಲಾಯಿತು.

ನ್ಯಾಯಮೂರ್ತಿ ಗವಾಯಿ ಅವರ ಮೇಲೆ ನಡೆದ ಈ ದಾಳಿ ಸಂವಿಧಾನ ಮತ್ತು ಪ್ರಜಾಪ್ರಭುತ್ವದ ಮೇಲಿನ ದಾಳಿಯಾಗಿದ್ದು, ವಕೀಲ ರಾಕೇಶ್ ಕಿಶೋರ್ ಮೇಲೆ ದೇಶ ದ್ರೋಹದ ಕೇಸ್ ದಾಖಲಿಸಬೇಕು ಎಂದು ಆಗ್ರಹಿಸಿದರು. ಬೌದ್ಧ ಉಪಾಸಕರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

# ವಾಲಿಬಾಲ್ ಪಂದ್ಯಾವಳಿ: ಜಿಲ್ಲಾ ಮಟ್ಟಕ್ಕೆ ಆಯ್ಕೆ



**ಕಲಬುರಗಿ:** 2025–26 ನೇ ಸಾಲಿನ ಕಲ್ಬುರ್ಗಿ ಉತ್ತರ ವಲಯದ ತಾಲೂಕು ಮಟ್ಟದ ವಾಲಿಬಾಲ್ ಪಂದ್ಯಾವಳಿಯಲ್ಲಿ ಅವರಾದ(ಬಿ) ಗ್ರಾಮದ ಕರ್ನಾಟಕ ಪಬ್ಲಿಕ್ ಸ್ಕೂಲ್ ಪ್ರಾಥಮಿಕ ವಿಭಾಗ ವಿದ್ಯಾರ್ಥಿಗಳು ತಾಲೂಕಿಗೆ ಪ್ರಥಮ ಸ್ಥಾನ ಗಳಿಸಿ ಜಿಲ್ಲಾ ಮಟ್ಟಕ್ಕೆ ಆಯ್ಕೆಯಾಗಿ ಶಾಲೆಗೆ ಕೀರ್ತಿ ತಂದಿದ್ದಾರೆ.

ಈ ಸಂದರ್ಭದಲ್ಲಿ ತಾಲೂಕಿನ ದೈಹಿಕ ಶಿಕ್ಷಣ ಅಧಿಕಾರಿ ದಶರಥ ಹಾಗೂ ಶಾಲೆಯ ಮುಖ್ಯಗುರುಗಳಾದ ಎಚ್. ಎಸ್. ಹಿರೇಮಠ, ಹಿರಿಯ ಮುಖ್ಯಗುರುಗಳು ಹಾಗೂ ದೈಹಿಕ ಶಿಕ್ಷಣ ಶಿಕ್ಷಕರ ಸಂಘದ ಜಿಲ್ಲಾ ಅಧ್ಯಕ್ಷರಾದ ಭೋಜನಗೌಡ ಪಾಟೀಲ, ದೈ.ಶಿ.ಶಿ.ದಯಾನಂದ, ತಂಡದ ತರಬೇತಿದಾರಾದ ಪ್ರವೀಣ್ ಇದ್ದರು.

"SIHI KAHI" Kannada Daily Morning, Editor, Owner, Publisher, Printer by **MARUTI BASAVANTAPPA HOASAMANI** Published from Chittaragi Cross, S.C. Colony, Ward No. 9, Amingada-587112, Tq. Hungund Dist : Bagalkot, Karnataka and Printed at **SUDIN PRINTERS**, Sector No. 33, Shop No. 38 & 40, Opp. Ambedkar Bhavan, **NAVANAGAR, BAGALKOT-587 101.** Dist : Bagalkot, Karnataka State